ಪಾದಯಾತ್ರಿ ಚಂದ್ರಶೇಖರ್ : ದಲಿತರ ಕುಸಿದ ನಂಬಿಕೆ

ನೆಹರೂ ಮನೆತನದ ಕರಾಳ ಪುರೋಹಿತಶಾಹಿ ಮತ್ತು ಬಂಡವಾಳ ಶಾಹಿ ದುರಾಡಳಿತದಲ್ಲಿ ನಿರ್ಜೀವವಾಗಿ ಬದುಕುತ್ತಿರುವ ಈ ದೇಶದ ದಲಿತರು ಮತ್ತು ಎಲ್ಲಾ ಜಾತಿಯ ಬಡವರು ಇಂದು ಹಸಿವು-ಅಸ್ಪೃಶ್ಯತೆ ಇಲ್ಲದ ಭಾರತ ಕಟ್ಟಬಲ್ಲಂಥ ಹೊಸ ಸಮರ್ಥ ರಾಷ್ಟ್ರೀಯ ನಾಯಕರಿಗಾಗಿ ಹಂಬಲಿಸುತ್ತಿದ್ದಾರೆ. ಈ ದಿಕ್ಕಲ್ಲಿ ನಿರಾಶೆಯು ವಾಜಪೇಯಿ, ಮೊರಾರ್ಜಿ, ಚರಣಸಿಂಗ್, ಜಗಜೀವನರಾಂಗಳ ನಡುವೆ ಈಗಿನ ಜನತಾ ಪಕ್ಷದ ಅಧ್ಯಕ್ಷ ಶ್ರೀ ಚಂದ್ರಶೇಖರರ ವ್ಯಕ್ತಿತ್ವ ನೊಂದವರೆಲ್ಲರಲ್ಲಿ ಆಶೆಮೂಡಿಸಿತ್ತು. ಆದರೆ ಇಂಥ 'ಸರಳ' 'ದಿಟ್ಟ' 'ಜಾತ್ಯಾತೀತ' ಚಂದ್ರಶೇಖರರಿಗೂ ಸಹ ಇಂದಿನ ಇಂಡಿಯಾದ ಎಲ್ಲಾ ಹಸಿವು-ಅಸ್ಪೃಶ್ಯತೆ, ನಿರಾಶೆಗಳ ಮೂಲವಾದ ಜಾತಿ ವ್ಯವಸ್ಥೆ ಬಗ್ಗೆ ಸ್ಪಷ್ಟ ತಿಳುವಳಿಕೆ ಇಲ್ಲ ಎಂಬುದು ಮೊನ್ನೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರೊಂದಿಗೆ ಇವರು ನಡೆಸಿದ ಮಾತುಕತೆಯಿಂದ ಗೊತ್ತಾಗಿದೆ! ಈ ಮಾತುಕತೆಯಲ್ಲಿ ಭಾಗವಹಿಸಿದ್ದ ನಮ್ಮ ಇಂದೂಧರ ಹೊನ್ನಾಪುರ ಅವರು ಅತ್ಯಂತ ನೋವಿನಿಂದ ಈ ವಿಚಾರವನ್ನು ಪಂಚಮಕ್ಕೆ ವರದಿಮಾಡಿದ್ದಾರೆ. –ಸಂಪಾದಕ

ಭಾರತ ಯಾತ್ರೆ ಕೈಗೊಂಡಿರುವ ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಮಾರ್ಚ್ 5ರಂದು ದಲಿತ ಸಂಘರ್ಷ ಸಮಿತಿ ಜತೆ ಚರ್ಚಿಸಿದರು. ಚರ್ಚೆ ಅನ್ನುವುದಕ್ಕಿಂತ ಅದು ಚಂದ್ರಶೇಖರರ ರಾಜಕೀಯ ಭಾಷಣವಾಗಿತ್ತೆಂದರೇ ಸರಿಯಾದೀತು. ದ.ಸಂ.ಸ ಚಂದ್ರಶೇಖರ್ ಬಗ್ಗೆ ಹೊಂದಿದ್ದ ನಂಬಿಕೆ ಅಲ್ಲಿ ಕುಸಿದುಬಿತ್ತು: ಎಲ್ಲ ರಾಜಕಾರಣಿಗಳಂತೆ ಕೇವಲ ರಾಜಕಾರಣಿಯಾಗಿ ಶೇಖರ್ ತಮ್ಮನ್ನು ತಾವೇ ತೆರೆದು ತೋರಿಸಿಕೊಂಡರು.

ದ. ಸಂ. ಸ. ಚರ್ಚೆಗೆಂದೇ ನೋಟ್ ಒಂದನ್ನು ತಯಾರಿಸಿತ್ತು. ಆದರೆ ಚಂದ್ರಶೇಖರ್ ಆ ನೋಟ್ ಬಗ್ಗೆ ಉಪೇಕ್ಷೆ ತಾಳಿದರು. "ಮುಖ್ಯಮಂತ್ರಿಗಳಿಗೆ ಈ ನೋಟ್ ಕೊಡ್ತೀನಿ" ಅಂದಷ್ಟೇ ಹೇಳಿ ಮುಗಿಸಿದರು. ನಮಗೆಲ್ಲ ಚಂದ್ರಶೇಖರರ ಮನೋಧರ್ಮ ಮತ್ತು ವರ್ತನೆ ಆಶ್ಚರ್ಯ ಹುಟ್ಟಿಸಿತು.

(10 ನೇ ಪುಟಕ್ಕೆ)

ಪಂಚಮ

ಸಂಪುಟ : 4 ಸಂಚಿಕೆ : 7


ಪಾಕ್ಷಿಕ ಪತ್ರಿಕೆ

ಬೆಲೆ-50 ಪೈಸೆ ಮಾರ್ಚ್ 20, 1983 ಪುಟ-12

ಸಂಘರ್ಷ ಸಮಿತಿ ನೆರಳಲ್ಲಿ ಹಸಿದ ಜನರ ಭೂ ಆಕ್ರಮಣ

ಹೆಗ್ಗಡದೇವನ ಕೋಟೆ ತಾಲ್ಲೂಕು ಕಂದಲಿಕೆ ಹೋಬಳಿ ದೇವಲಾಪುರದ ಭೂ ಆಕ್ರಮಣ ಚಳುವಳಿ ದಲಿತ ಸಂಘರ್ಷ ಸಮಿತಿಯ ಚರಿತ್ರಾರ್ಹ ಹೋರಾಟಗಳ ಪೈಕಿ ಒಂದು. ಸುಮಾರು ಇನ್ನೂರು ಬಡಕುಟುಂಬಗಳು ಜೀವದ ಹಂಗು ತೊರೆದು ಭೂ ಹೋರಾಟದಲ್ಲಿ ಪಾಲ್ಗೊಂಡಿವೆ. "ನಮಗೆ ಅನ್ನಬೇಕು. ನಮಗೆ ಭೂಮಿ ಬೇಕು" ಎಂಬ ಇವರ ಹಸಿವಿನ ಕೂಗು ನಮ್ಮ ಜಡಸರ್ಕಾರವ ಹಿಡಿದು ಅಲ್ಲಾಡಿಸಿದೆ. ಹೋರಾಟದ ಆತ್ಮೀಯತೆಯಲ್ಲಿ ತಮ್ಮೆಲ್ಲ ಜಾತಿಯ ಎಲ್ಲೆಗಳನ್ನು ಮರೆತು ಒಂದಾದ ಈ ಜನರು ಯಾವುದೇ ಸರ್ಕಾರಿ ಒತ್ತಡಕ್ಕೆ ಮಣಿಯದೆ ನಿಂತಿದ್ದಾರೆ.

(4 ನೇ ಪುಟಕ್ಕೆ)



'ಜನಕಲಾರಂಗ' ಕಂಡ ಜಾತಿ ವೈರುಧ್ಯ

ಫೆಬ್ರವರಿ ತಿಂಗಳು ತಾರೀಖು 18, 19, 20 ರಂದು ನಮ್ಮ ಸಾಂಸ್ಕೃತಿಕ ತಂಡವಾದ 'ಜನ ಕಲಾ ರಂಗ' ವು ಮೈಸೂರು ಸುತ್ತಾ ಮುತ್ತಾ ನಡೆಸಿದ ಸಾಂಸ್ಕೃತಿಕ ಜಾಥಾ ಕಾರ್ಯಕ್ರಮಗಳಲ್ಲಿ ಆದ ಅನುಭವವನ್ನು ಸಂಕ್ಷಿಪ್ತವಾಗಿ ನಮ್ಮ ಪಂಚಮ ಓದುಗರೊಡನೆ ಹಂಚಿಕೊಳ್ಳುವ ಸದುದ್ದೇಶದಿಂದ ಇಲ್ಲಿ ಬರೆಯಲಾಗಿದೆ. ಸುಮಾರು 12 ಜನರಿದ್ದ ನಾವುಗಳು ಸೈಕಲ್‌ಗಳ ಮೇಲೆ ಹೊರಟು 18 ರಂದು ಉದ್ಬೂರು ಗ್ರಾಮದಿಂದ ಜಾಥಾ ಪ್ರಾರಂಭಿಸಿ 20 ರಂದು ಮರಟಿ ಕ್ಯಾತನಹಳ್ಳಿಯಲ್ಲಿ ಮುಕ್ತಾಯ ಮಾಡಿದೆವು. ಪೂರ್ವಾಲೋಚನೆಯಿಲ್ಲದ ಮತ್ತು ಯಾವುದೇ ರೀತಿಯ ಪರಿಚಯವಿಲ್ಲದ ಹಳ್ಳಿಗಳಿಗೆ ನಾವು ಕಾರ್ಯಕ್ರಮ ಕೊಡುವಾಗ ಸಹಜವಾಗಿಯೇ ಅಳುಕಿದ್ದಿತು. ಅಂತೆಯೇ ನಮ್ಮ ಉದ್ದೇಶವು ಕೂಡ ಸ್ಪಷ್ಟ. ಹಳ್ಳಿಯ ರೈತರಲ್ಲಿ, ಕೂಲಿಕಾರರಲ್ಲಿ ಬಡ ಜನತೆಯಲ್ಲಿ ಇಂದಿನ ರಾಜಕೀಯ ಮತ್ತು ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಚಿಂತಿಸುವ ಮತ್ತು ಚೈತನ್ಯ ಮೂಡುವಂತೆ ಮಾಡುವುದೇ ಆಗಿತ್ತು. ಎಷ್ಟೇ ಹಿಂಜರಿಕೆ ಇದ್ದರೂ ಕಾರ್ಯಕ್ರಮ ಪ್ರಾರಂಭಿಸಿದ ನಂತರ ಮರೆತು ಹೋಗುತ್ತಿತ್ತು. ಪ್ರತಿ ಹಳ್ಳಿಗಳಿಗೆ ಹೋದಾಗ ಸ್ವತಃ ಪರಿಚಯ ಮಾಡಿಕೊಳ್ಳುವುದರ ಮೂಲಕ ಕಾರ್ಯಕ್ರಮ ರೂಪಿಸಿಕೊಳ್ಳುತ್ತಿದ್ದೆವು. ಉದಾ : ಕೇಳ್ರಪ್ಪೋ. ಕೇಳಿ, ನಾವು ಮೈಸೂರಿನ ಜನಕಲಾರಂಗದವ್ರು ಬಂದಿದ್ದಿವಿ. ಇವತ್ತು ನಿಮ್ಮೂರಿನ ಚಾವಡಿ ಹತ್ರ ರೈತರ ಬಗ್ಗೆ, ಬಡವ್ರ ಬಗ್ಗೆ ನಾಟಕ ಆಡ್ತೀವಿ. ನೀವೆಲ್ಲಾ ಬರ್ಬೇಕು. ದುಡ್ಡು ಕಾಸಿಲ್ಲ ಪುಕ್ಸಟ್ಟೆ ಕಣ್ರಪ್ಪೋ...." ಅಂತ ಘೋಷಣೆ ಕೂಗುವುದರ ಮೂಲಕ ಪ್ರಚಾರ ಮಾಡಿ ಬರುತ್ತಿದ್ದೆವು. ಪ್ರತಿ ಊರಿನಲ್ಲೂ ಕಾರ್ಯಕ್ರಮವನ್ನು ಊರಿನ ಮಧ್ಯೆ ಭಾಗದಲ್ಲಿ ಸಾಮಾನ್ಯವಾಗಿ ಜನ ಒಂದೆಡೆ ಕಲೆಯುವ ಕಡೆ ನಡೆಸುತ್ತಿದ್ದೆವು. ವಿಶೇಷವಾಗಿ ಆಶ್ಚರ್ಯಕರವಾಗಿ ಕಂಡದ್ದೇನೆಂದರೆ ಪ್ರತಿ ಊರಿನಲ್ಲಿ ಕಾರ್ಯಕ್ರಮ ನಡೆಸುವಾಗ ನಮ್ಮ ಹತ್ತಿರ ಮೇಲ್ಜಾತಿಯ ಜನರೇ ಹೆಚ್ಚಾಗಿ ಸೇರುತ್ತಿದ್ದರು. ಅದರಲ್ಲಿ ಹರಿಜನರು ಮಾತ್ರ ಬಂದರೂ ಬಹಳ ಕಡಿಮೆ ಜನ; ದೂರದಲ್ಲಿ ಬಂದು ನಿಲ್ಲುತ್ತಿದ್ದರು. ಯಾಕೆ ಆ ರೀತಿ ಎಂಬುದರ ಬಗ್ಗೆ ವಿವರ ಕೊಡುವುದು ಅಷ್ಟು ಸುಲಭವಲ್ಲ ಎನಿಸುತ್ತದೆ. ಜಾತಿ ವಿಷಯದಲ್ಲಿ ಈ ಹಳ್ಳಿಯ ಜನರ ಮನಸ್ಸು ಎಷ್ಟು ಕ್ರೂರವಾಗಿ ಕೆಲಸ ಮಾಡುತ್ತಿದೆ ಎಂದರೆ ಬಹುಶಃ ನಗರದಲ್ಲಿ ವಾಸಿಸುವ ಯಾವುದೇ ಪ್ರಗತಿಪರ ಸಂಸ್ಥೆಗಳೂ ಪ್ರತಿ ಹಳ್ಳಿಗಳಲ್ಲಿ ಹತ್ತಾರು ವರ್ಷ ಕೆಲಸ ಮಾಡಿದರೂ ಕೂಡ ರಿಪೇರಿ ಮಾಡಲಾಗದಷ್ಟು ಆಳದಲ್ಲಿ ಈ ಜನ ಬದುಕಿದ್ದಾರೆ. ಜಾತೀಯತೆ ಈ ಜನರಲ್ಲಿ ಅಂದರೆ ಮಕ್ಕಳಲ್ಲಿ ಕೂಡ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದಕ್ಕೆ ನಮಗೆ ಸಿಕ್ಕ 2 ನಿದರ್ಶನಗಳು :

ಜಯಪುರದಲ್ಲಿ ಬೀದಿ ಪ್ರಚಾರಕ್ಕೆ ಹೊರಟಾಗ ಸಹಜವಾಗಿಯೇ ಮಕ್ಕಳು ನಮ್ಮ ಜೊತೆ ಕೂಡಿಕೊಂಡವು. ನಾವು ಪ್ರಚಾರ ಮಾಡಿಕೊಂಡು ಹೊರಟ ಬೀದಿ ಮೇಲ್ಜಾತಿಯವರದಾಗಿತ್ತು. ಈ ಬೀದಿ ಮುಗಿಸಿ ಹರಿಜನ ಕೇರಿಗೆ ಕಾಲಿರಿಸುತ್ತಿದ್ದಾಗ ಒಂದೆರಡು ಹುಡುಗರು "ಸಾ ಅಲ್ಲಿಗೆ ಬ್ಯಾಡ ಸಾ" ಅಂದವು. ನಾವು ಯಾಕೆ ಅಂತ ಕೇಳಿದಾಗ ಅದು

ಜನಕಲಾ ರಂಗದ ಒಂದು ಜಾಥಾ ಅನುಭವ

ಏಕೆಗಳ ಬೀದಿ ಸಾ ; ಅಲ್ಲಿಗೆ ಬ್ಯಾಡಬನ್ನಿ ಅಂದವು. ನಾವು 'ಪರವಾಗಿಲ್ಲ ಬನ್ನಿ ಅವ್ರು ಮನುಷ್ಯರಲ್ವಾ ಬನ್ನಿ ಹೋಗೋಣ' ಅಂದಾಗ ಅವು ಪೆಚ್ಚಾಗಿ ಜೊತೆಯಲ್ಲೇ ಬಂದವು.

ಆದ್ರೆ ಮುಳ್ಳೂರಿನಲ್ಲಿ ಇನ್ನೂ ವಿಚಿತ್ರವಾಗಿತ್ತು. ಪ್ರಚಾರ ಮಾಡಿಕೊಂಡು ಹೊರಟು ಹರಿಜನರ ಕೇರಿಗೆ ಬಂದಾಗ ಒಂದೈದಾರು ಹುಡುಗರು ಬರ್ಲೆ ಇಲ್ಲ ; ದೂರದಲ್ಲಿ ನಿಂತಿದ್ರು ; ಇಷ್ಟು ಹೊತ್ತು ಜೊತೇಲೆ ಇದ್ದವು, ಈ ಕೇರಿ ಬಂದಾಗ ಆ ಬೀದಿ ಮಣ್ಣು ಕೂಡ ತುಳಿಯದವರಂತೆ ನಿಂತಿದ್ರು. ನಾವು ವಾಪಸ್ಸು ಬಂದ ಮೇಲೆ ಕೇಳಿದೆವು : "ಯಾಕ್ರೊ ನೀವು ಬರ್ಲಿಲ್ಲ" ಅಂದೆವು. ಆ ಹುಡುಗ ಸುಮ್ನೆ ನಗ್ತಾ ಇತ್ತು. ಸರಿ ಸ್ವಲ್ಪ ಮಾತು ಬದಲಾಯಿಸಿ ನೀವ್ರು ಯಾವ ಮತದವ್ರು ಅಂದೆವು.

"ನಾವು ಬ್ರಾಹ್ಮಣರು. ನಾವು ಅಲ್ಲೆಲ್ಲೂ ಹೋಗ್ಬಾರ್ದು ಅಂತ ನಮ್ಮಪ್ಪ ಹೇಳಿದ್ದಾರೆ".

"ನಿಮ್ಮಪ್ಪ ಏನ್ ಕೆಲ್ಸ ಮಾಡ್ತಾರೆ".

"ಮೇಷ್ಟ್ರು" ಅಂದ ಒಂದು ಹುಡುಗ. ಉಳಿದವು ಹಾಗೆ ನಗ್ತಾ ಇದ್ದವು. ಪದೇ ಪದೇ ಇದೇ ರೀತಿ ಆಗುತ್ತಿದ್ದುದು ಮಾನಸಿಕವಾಗಿ ಒಂದು ರೀತಿಯ ವಿಚಿತ್ರ ಹಿಂಸೆಯಾಗುತ್ತಿತ್ತು. ಸೆಟ್ಟನಾಯಕನ ಹಳ್ಳಿಯಲ್ಲಿ ಇದೇ ರೀತಿ, ಆದ್ರೆ ಸ್ವಲ್ಪ ಬೇರೆ ರೀತಿ ಅನುಭವ : ನಾವು ಒಬ್ಬ ಹರಿಜನ ಮೇಸ್ತ್ರ ಪರಿಚಯದಿಂದಾಗಿ ಅವರ ಕೇರಿಯಲ್ಲಿ ಕಾರ್ಯಕ್ರಮ ನಡೆಸಿದೆವು. ಆಗ ಮೇಲ್ಜಾತಿಯ ಜನ ಒಂದು ನಾಲ್ಕಾರು ಜನ ಬಿಟ್ಟು ಬೇರೆ ಯಾರ ಬರ್ಲೆ ಇಲ್ಲ. ಹೀಗೆ ಪ್ರತಿ ಹಳ್ಳಿಯಲ್ಲಿ ಕಾರ್ಯಕ್ರಮ ನಂತರ ಅವರ ಜೊತೆ ಮಾತಾಡುವಾಗ ಸಹಜವಾಗಿ ನಮ್ಮ ವಿಷಯದ ಬಗ್ಗೆ ಮೆಚ್ಚುಗೆಯ ಮಾತಾಡುತ್ತಿದ್ದರು. ಆಶ್ಚರ್ಯ ಪಡುತ್ತಿದ್ದರು. ಕೆಲವು ಕಡೆ 'ನಿಮ್ಮ ಹಾಡುಗಳನ್ನು ಬರೆದುಕೊಡಿ. ನಾವೂ ಸಂಘ ಕಟ್ಟುಸ್ತೇವಿ' ಮುಂತಾಗಿ ಪ್ರತಿಕ್ರಿಯಿಸುತ್ತಿದ್ದರು. ಅಂದರೆ ವಿಷಯದ ಬಗ್ಗೆ ಪ್ರತಿ ಜನರ ಮನೋಭಾವನೆ ಒಂದೇ ಆದರೂ ತಮ್ಮ ಅಕ್ಕ ಪಕ್ಕ ಬದುಕುವ ಜನರ ಬಗ್ಗೆ ಸಮಾನ ಅಭಿರುಚಿ, ಒಂದೇ ಮನೋಭಾವನೆ ಇಲ್ಲದಿದ್ದುದು ತೀರಾ ಸ್ಪಷ್ಟವಾಗಿ ಕಾಣುತ್ತಿತ್ತು. ಪ್ರತಿ ಹಳ್ಳಿಯ ಜನರೂ ಕೂಡ ತಮ್ಮ ಅಂತರಗಳನ್ನು ಕಾಪಾಡಿಕೊಂಡೆ ನಮ್ಮ ಕಾರ್ಯಕ್ರಮವನ್ನು ನೋಡುತ್ತಿದ್ದುದು ವಿಷಾದದ ಸಂಗತಿ. ಅವರಿಗಾಗಿ ನಮ್ಮ ಈ ಸಾಂಸ್ಕೃತಿಕ ಮಾಧ್ಯಮದ ಮೂಲಕ ತಿಳಿಸುವ ಯಾವುದೇ ವಿಚಾರ ಕೂಡ ಅವರ ಬದುಕಿಗೆ ಸಾಮಾನ್ಯ ವಿಷಯವಾಗಿದ್ದರೆ ಮಾತ್ರ ಮತ್ತು ಅನ್ವಯಿಸುವಂತಿದ್ದರೆ ಮಾತ್ರ ನಮ್ಮ ಈ ಪ್ರಗತಿಗಾಮಿ ಚಟುವಟಿಕೆಗಳೂ ಊರ್ಜಿತವಾಗಬಲ್ಲವು ಎಂಬ ಕಟು ಸತ್ಯ ನಮಗೆ ಅರ್ಥವಾಯಿತು. ಮತ್ತು ಈ ಸುತ್ತಮುತ್ತಲಿನ ಹಳ್ಳಿಯ ಜನರ ಸ್ಥಿತಿಗತಿಗಳು ಪೂರ್ಣವಾಗಿ ಅರ್ಥವಾಗದಿದ್ದರೂ ತಿಳಿಯಾಗಿ ನಮಗೆ ಅರ್ಥವಾದದ್ದು ಈ ಜಾಥಾದಿಂದಲೇ. ಆ ಕಾರಣಕ್ಕಾಗಿ ಜನರ ಹತ್ತಿರ ವಿಷಯ ಕೊಂಡೊಯ್ಯುವ ಈ ಮಾಧ್ಯಮ ತೀರಾ ಅನಿವಾರ್ಯವಾದದ್ದೆಂದು ಅನಿಸುತ್ತದೆ. ಈ ರೀತಿಯ ಚಟುವಟಿಕೆಗಳು ಹೆಚ್ಚಿದಷ್ಟು ನಮ್ಮೆಲ್ಲಾ ಸೈದ್ಧಾಂತಿಕ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಬಹುದಾದ ಉತ್ತಮ ಮಾರ್ಗಸೃಷ್ಟಿಯಾಗಬಲ್ಲದು.

—ಎಸ್. ತುಕಾರಾಂ

ಭಾರತದ ಜಾತಿ ಪದ್ಧತಿಯು ಇವೊತ್ತಿನರಾಷ್ಟ್ರ
ದ ಭೌತಿಕ ಮತ್ತು ಆಧ್ಯಾತ್ಮಿಕ ಅಧಃಪತನದ
ಏಕಮಾತ್ರ ವ್ಯಾಪಕ ಕಾರಣವೆಂದು ದೃಷ್ಟಿಸಬೇಕು.
ಎಲ್ಲ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರನ್ನು
ಇದು ನಿರ್ಬಲಗೊಳಿಸಿದೆ. ಮನಸ್ಸು, ವಿಶೇಷವಾಗಿ
ನ್ನ ಪ್ರಜ್ಞಾಹೀನ ಪದರುಗಳ ಜಾತಿ ಅಚ್ಚಿನಲ್ಲಿ
ಟ್ಟಿಯಾಗಿ ಎರಕ ಹೊಯ್ದಿರುವುದರಿಂದ, ಜನರು
ಮ್ಮ ಸ್ವಂತ ಜಾತಿಯ ಅಭಿವೃದ್ಧಿಯನ್ನು ರಾಷ್ಟ್ರ
ರ ಪ್ರಗತಿಯೊಡನೆ ಏಕರೂಪವಾಗಿ ಸಮೀಕರಿಸು
ತ್ತಾರೆ. ಅಂಥ ಜನಗಳು ತಮ್ಮ ಅಭಿಪ್ರಾಯ
ಮತ್ತು ಆಚರಣೆಗಳಿಂದ ದೇಶಕ್ಕೆ ತಾವು ತಂದೊ
ಡ್ಡುವ ಪಿಡುಗನ್ನು ಸುಲಭವಾಗಿ ಅರ್ಥಮಾಡಿ
ಕೊಳ್ಳುವುದಿಲ್ಲ.

ಜಾತಿ ತೊಲಗಿಸುವುದು ದೇಶದ ಎಲ್ಲ ರಾಜಕೀ
ಯ ಪಕ್ಷಗಳ ಘೋಷಿತ ನೀತಿಯೇ ಆಗಿದೆ. ಆದರೆ
ಅಂಥ ಘೋಷಣೆಯ ನಿಜಾಂಶಗಳನ್ನು ಅವರು
ಯೋಚಿಸಿಲ್ಲ. ಅವರ ಇತರ ಧ್ಯೇಯಗಳೊಡನೆ
ಜಾತಿ ನೀತಿಯನ್ನು ಅಂತರ್ಗತಗೊಳಿಸುವ ಪ್ರಯ
ತ್ನಕ್ಕೆ ಕೈ ಹಾಕಿಲ್ಲ. ಅಥವಾ ಕಾರ್ಯರೂಪಕ್ಕೆ
ತರುವ ಸ್ಥಿರ ಕಾರ್ಯಕ್ರಮಗಳನ್ನು ಹೊಂದಿಲ್ಲ.

ದುಡಿಮೆಗಾರರ ಸರ್ವಾಧಿಕಾರ ಮತ್ತು ಅದನ್ನು
ನಡೆಯುವ ಆಯುಧವಾದ 'ಮುಂದಾಳು ವರ್ಗ,
(Vanguard class)ದ ಕಮ್ಯುನಿಸ್ಟ್ ಸಿದ್ಧಾಂ
ತಕ್ಕೂ ಜಾತಿ ಪದ್ಧತಿಯ ದ್ವಿಜ ಸಿದ್ಧಾಂತಕ್ಕೂ
ಇದ್ದು ಕಾಣುವ ಹೊಂದಾಣಿಕೆ ಇದೆ. ಪರಿಣಾಮ
ವಾಗಿ ಕೀಳು ಜಾತಿ ಕಮ್ಯುನಿಸ್ಟನಿಗಿಂತ ಮೇಲು
ಜಾತಿಯ ಕಮ್ಯುನಿಷ್ಟ ಯಾವಾಗಲೂ ಮೇಲೆ
ಬೆಳೆಯುತ್ತಾನೆ, ಕೋಟಿಯಲೊಬ್ಬ ವಿಶೇಷ ಪ್ರತಿ
ಭಾವಂತನನ್ನುಳಿದು.

ತನ್ನ ಇತರ ನೀತಿಗಳಂತೆಯೇ ಕಾಂಗ್ರೆಸ್ಸಿನ
ಜಾತಿ ನೀತಿಯು ದ್ವಿಮುಖ ರೂಪದ್ದು. ಅವರು
ಜಾತಿ ಪದ್ಧತಿಯ ನಾಶಮಾಡಲು ಬಯಸುತ್ತಾರೆ.
ಆದರೆ ಅದೇ ಕಾಲಕ್ಕೆ ಅರ್ಹತೆ ಅನುಸರಿಸಿ ಎಲ್ಲರಿ
ಗೂ ಸಮಾನವಕಾಶದ ಆಧಾರದ ಮೇಲೆ ದೇಶದ
ಪುನರ್ನಿರ್ಮಾಣ ಮಾಡುವುದೆನ್ನುತ್ತಾರೆ. ಸಾವಿರಾ
ರು ವರ್ಷಗಳಿಂದ ಜಾತಿ ಸಂಸ್ಕಾರಗಳು, ಸಂಪ್ರದಾ
ಯಗಳು ಮತ್ತು ಸವಲತ್ತುಗಳು ನೆಲೆಗೊಂಡಿರುವ
ಇದು ದೇಶದಲ್ಲಿ ಅರ್ಹತೆ ಆಧರಿಸಿದ ಸಮಾನಾವ
ಕಾಶದ ನೀತಿಯು ಸಧ್ಯದ ಅಸಮಾನತೆಗಳನ್ನು ತಗ್ಗಿ
ಸುವ ಬದಲು ಹಿಗ್ಗಿಸುತ್ತಲೇ ಸಾಗುತ್ತದೆ. ವ್ಯಾಪಾ
ರ ಮೇಲ್ದರ್ಜೆಯ ಸರ್ಕಾರಿ ಸೇವೆಗಳು ರಾಜಕೀ
ಯ ಮತ್ತು ಮಿಲಿಟರಿ ನಾಯಕತ್ವ ಇಂಥ ವಿಷಯ
ಗಳಲ್ಲಿ ವಂಶಪರಂಪರೆಯ ಅರ್ಹತೆಗಳನ್ನು ಹೊಂ
ದಿರುವ ದ್ವಿಜರು ಪಡೆದಿದ್ದಾರೆ. ಆದ್ದರಿಂದಲೇ
ಕಾಂಗ್ರೆಸ್ ಮಾರ್ಗ ಜಾತಿ ನಾಶದತ್ತ ನಡೆಯಲಾ
ರದು.

ಜಾತಿವಿನಾಶ :
ಲೋಹಿಯಾ ದೃಷ್ಟಿ

ಭಾರತದಲ್ಲಿ ಸಂಪೂರ್ಣ ಜಾತಿ ಪದ್ಧತಿಯ ನಾಶವಾಗುವವರೆಗೆ ದೇಶದ ಪುನರ್ನಿರ್ಮಾಣವು ಅರ್ಹತೆಯ ಬದಲು ಆದ್ಯತೆಯ ಅವಕಾಶಗಳನ್ನು ಅಧರಿಸಬೇಕು. ಮಹಿಳೆಯರು, ಹರಿಜನರು, ಶೂದ್ರರು, ಹಿಂದುಳಿದ ಮುಸ್ಲಿಂ ಮತ್ತು ಕ್ರೈಸ್ಥರು ಮತ್ತು ಆದಿವಾಸಿಗಳು ಈ ದೇಶದ ಒಟ್ಟು ಜನ ಸಂಖ್ಯೆಯ ಶೇ. 85ಕ್ಕೂ ಮಿಕ್ಕಿದ್ದಾರೆ. ಆದರೆ ಗಣನೀಯ ಕ್ಷೇತ್ರಗಳಾದ ರಾಜಕೀಯ, ಸೈನ್ಯ, ವಾಣಿಜ್ಯ, ಮತ್ತು ಉನ್ನತ ಮಟ್ಟದ ಸರ್ಕಾರಿ ಹುದ್ದೆಗಳಲ್ಲಿ ಶೇ. 10 ರಷ್ಟೂ ಈ ಜನಗಳಿಲ್ಲ. ಈ ಅಸಮತೋಲನ ಸರಿಪಡಿಸದ ಹೊರತು ಜಾತಿಪದ್ಧತಿಯೂ ತೊಲಗಲಾರದು ; ದೇಶದಲ್ಲಿ ಹೊಸ ಜೀವನವೂ ಉದಯಿಸಲಾರದು. ಆದ್ದರಿಂದಲೇ ಈ ಹಿಂದುಳಿದ ವರ್ಗಗಳು ನಾಯಕತ್ವದ ಅವಕಾಶಗಳನ್ನು ಪಡೆ

ಅನುವಾದ : ಭಕ್ತರಾಮೇಗೌಡ

ದುಕೊಳ್ಳಬೇಕು. ಸಾರ್ವಜನಿಕ ಜೀವನದ ಜವಾಬ್ದಾರಿ ಸ್ಥಾನಗಳಲ್ಲಿ ಅವರಿಗೆ ಕನಿಷ್ಟ ಶೇ. 60 ಭಾಗ ದೊರೆಯಬೇಕು. ಈ ಬದಲಾವಣೆಯ ಅಗತ್ಯ ಬಿದ್ದಲ್ಲೆಲ್ಲಾ ಕಾನೂನುಬದ್ಧ ರಕ್ಷಣೆಯಿಂದ ಪರಿಣಾಮಗೊಳ್ಳಬೇಕು ; ಆದರೆ ಹೆಚ್ಚಾಗಿ ಮನಃಸ್ಥಿತಿಯ ಬದಲಾವಣೆಯ ಮೂಲಕವೇ ಇದು ಸಂಭವಿಸಬೇಕು. ಆದ್ಯತೆಯ ಅವಕಾಶಗಳು ಕೆಲವು ವರ್ಷಗಳು ಸಿಕ್ಕಿದ ಮೇಲೆ ಹಿಂದುಳಿದ ವರ್ಗಗಳಲ್ಲೂ ಅರ್ಹತೆ ಮತ್ತು ಸಂಸ್ಕಾರಗಳು ರೂಪುಗೊಳ್ಳುತ್ತವೆ. ಮತ್ತು ಇಂಡಿಯಾ ದೇಶವು ಸರ್ವಾಂಗ ಸಬಲವಾಗುತ್ತದೆ.

ಹಿಂದುಳಿದ ಜಾತಿಗಳಿಗೆ ಸರ್ಕಾರಿ ಸೇವೆಗಳಲ್ಲಿ ಕಾನೂನುಬದ್ಧ ಅವಕಾಶ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೊರತಾಗುವಂತೆ ಮೀಸಲು ಅವಕಾಶಗಳಿಲ್ಲದಿದ್ದರೂ ಹಿಂದುಳಿದ ಜಾತಿಗಳು ಶೇ. 60 ರಿಂದ 70 ಮೀಸಲು ಅವಕಾಶಗಳನ್ನು ತಾವೇ ಪಡೆದುಕೊಳ್ಳುವುದಾರೆದ ಅದು ರಾಷ್ಟ್ರದ ಭಾಗ್ಯೋದಯ, ಆದರೆ ಶಿಕ್ಷಣ ಕ್ಷೇತ್ರದಲ್ಲಿ ಯಾವ ಮಗುವೂ ಇನ್ನೊಬ್ಬನಿಗಿಂತ ಬೇರೆಯಾದ ಅವಕಾಶಗಳನ್ನು ಅನುಭವಿಸಬಾರದು. ಎಲ್ಲರೂ ಶಿಕ್ಷಣದಲ್ಲಿ ಸಮಾನಾವಕಾಶ ಪಡೆಯಬೇಕು. ಸರ್ಕಾರಿ ಹುದ್ದೆಗಳಿಗೆ ಮಾತ್ರ ತಾರತಮ್ಯ ಚಲಾಯಿಸಬೇಕು. ವಿದ್ಯಾವಂತ ದ್ವಿಜರು ಉಳಿದ ಕ್ಷೇತ್ರಗಳಲ್ಲಿ ತಮ್ಮ ದೆಶೆಗೆ ಪ್ರಯತ್ನಿಸಬೇಕು.

ಸರ್ಕಾರವು ಹಿಂದುಳಿದ ವರ್ಗಗಳ ಸಮಗ್ರ ಶಿಕ್ಷಣಕ್ಕೆ ಮೂಲ ವ್ಯವಸ್ಥೆಗಳನ್ನು ಮಾಡಿಕೊಡಬೇಕು; ಉನ್ನತ ವ್ಯಾಸಂಗದ ಅನುಕೂಲತೆಗಳನ್ನು ವಿಸ್ತರಿಸಬೇಕು.

ಹಿಂದುಳಿದ ಜಾತಿಗಳು ತಮ್ಮ ಮಾರ್ಗ-ದಲ್ಲೊದಗುವ ತೊಡಕುಗಳ ಕಡೆ ಗಮನ ಕೊಟ್ಟು ಜಾತಿ ತೊಡೆಯುವ ನೀತಿಯನ್ನು ಕಾರ್ಯರೂಪಕ್ಕಿಳಿಸುವ ಜತೆಯಲ್ಲೇ ಈ ತೊಡಕುಗಳನ್ನೂ ದೂರ ತಳ್ಳಬಹುದು. ಸಮಾಜದ ಕೆಳದರ್ಜೆಯ ಜನ ಪ್ರವೃತ್ತಿ ಮೂಲವಾಗಿ ಶಿಷ್ಟ ಜನರನ್ನು ಅನುಕರಿಸುತ್ತದೆ. ಹಿಂದುಳಿದ ಜಾತಿಗಳು ದ್ವಿಜರ ದುರ್ನಡತೆಗಳನ್ನು ಅನುಕರಿಸುವುದರಿಂದ ದೂರವಿರಬೇಕು. ವಿಶೇಷವಾಗಿ ಕೆಳಜಾತಿಯ ಅದರಲ್ಲೂ ಮುಂದಾಳತ್ವವನ್ನು ಹೊಂದಿರುವ ಮತ್ತು ನಿರ್ವಹಿಸುವವರೂ ಅಸೂಯೆಯನ್ನು ಬಿಟ್ಟು ಬಲವಾದ ಚಾರಿತ್ರ್ಯವನ್ನು ಹೊಂದಲು ಪ್ರಯತ್ನಿಸಬೇಕು ; ಅಸೂಯೆಗಾಗಿ ನಾಯಕತ್ವವನ್ನು ಕೆಟ್ಟ ಜನಗಳ ಕೈಗೆಸೆಯಬೇಕಾಗುತ್ತದೆ. ನಮ್ಮ ಪ್ರಯತ್ನ ಯಾವಾಗಲೂ ಹಿಂದುಳಿದ ಜಾತಿಗಳಿಗೆ ಶೇ. 60ಕ್ಕೂ ಹೆಚ್ಚು ಜವಾಬ್ದಾರಿ ಸ್ಥಾನಗಳನ್ನು ಕೊಡುವುದಾದರೂ, ಪ್ರತಿಯೊಂದು ಸ್ಪರ್ಧೆಯಲ್ಲೂ ಒಬ್ಬ ಹಿಂದುಳಿದ ಅಭ್ಯರ್ಥಿಯಿದ್ದು ಉಳಿದವರೆಲ್ಲ ಮೇಲು ಜಾತಿಯವರಿದ್ದಾಗ, ಅಸೂಯೆಯ ವಿಷ ಹಬ್ಬುವ ಸಂಭ್ರಮ ನಡೆಯಬಾರದು.

ನೂರಾರು ಹಿಂದುಳಿದ ಜಾತಿಗಳಿದ್ದು, ಬಿಡಿಯಾಗಿ ತೆಗೆದುಕೊಂಡಾಗ ಅವರು ಚುನಾವಣೆ ಉದ್ದೇಶಗಳಿಗೆ ನಿರ್ಣಾಯಕ ಬಹುಸಂಖ್ಯಾತರಾಗಲಾರರು, ಆದರೆ ಅವರೆಲ್ಲರನ್ನೂ ಒಟ್ಟುಗೂಡಿಸಿ ನೋಡಿದಾಗ ಭಾರತದ ಜನಸಂಖ್ಯೆಯ 2/3 ಬಾಗ ಆಗುತ್ತಾರೆ. ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಅಂಥ ಹಿಂದುಳಿದ ಜಾತಿಗಳು ನಮ್ಮ ಗಮನ ಸೆಳೆಯಬೇಕು ಮತ್ತು ಆ ದರ್ಜೆಗಳಲ್ಲೆ ನಾಯಕರ ಸೃಷ್ಟಿಯಾಗಿ ಅವರ ಧ್ವನಿ ಮತ್ತು ಚರ್ಯೆಗಳಿಂದ ತೃಪ್ತಿ, ಸ್ವಗೌರವ ಮತ್ತು, ನಿರ್ಭಯತೆಗಳು ತುಂಬಿ ಚೇತರಿಸಿಕೊಳ್ಳಬಹುದು.

ಹಿಂದುಳಿದ ಜಾತಿಗಳು, ತಮ್ಮ ಹೆಸರಿನಲ್ಲಿ

(ಮುಂದಿನ ಪುಟಕ್ಕೆ)

ದಲಿತ ಸಂಘರ್ಷ ಸಮಿತಿಯ ಭೂ ಆಕ್ರಮಣ ಚಳುವಳಿ

(ಮೊದಲನೆ ಪುಟದಿಂದ)

ಹೊಲೆಮಾದಿಗರಾದಿಯಾಗಿ ಗೌಡರು, ಸೋಲಿಗರು, ತೆಲುಗುಶೆಟ್ಟರು ಕಾಡುಕುರುಬರು ಲಿಂಗಾಯಿತರು–ಹೀಗೆ ಅನೇಕ ಜಾತಿಗಳ ಜನರು ದಲಿತ ಸಂಘರ್ಷ ಸಮಿತಿಯ ನಾಯಕತ್ವದಲ್ಲಿ ಹಸಿವಿನ ವಿರುದ್ಧ ಹೋರಾಟ ಮಾಡುತ್ತಿರುವರು. ಜನತಾ ಸರ್ಕಾರವು ಹಸಿದ ಜನರ ಹೋರಾಟವನ್ನು ಕಡೆಗಣಿಸಿ ಕುಂತಿದೆ. ಆದರೆ ಇದೇ ತಾಲ್ಲೂಕಿನ ಸಾವಿರಾರು ಎಕರೆ ಭೂಮಿಯನ್ನು ಕೆಲವು ಶ್ರೀಮಂತರು ನುಂಗಿದ್ದಾರೆ. ಅವರ ಅಕ್ರಮಗಳ ವಿರುದ್ಧ ಚಕಾರವೆತ್ತದ ಸರ್ಕಾರ ಮತ್ತದರ ಅಧಿಕಾರಿಗಳು ಬಡವರ ವಿರುದ್ಧ ಕಾನೂನುಗಳನ್ನು ಬಳಸಲು ಒಳಗೊಳಗೆ ಪ್ರಯತ್ನಿಸುತ್ತಿರುವುದು ತೀರಾ ನಾಚಿಕೆಗೇಡಿನ ಸಂಗತಿ.

ದೇವಲಾಪುರದ ಸರ್ವೆನಂಬರು 42 ರಲ್ಲಿ 495.36 ಎಕರೆ ಜಮೀನಿದೆ. 1982 ನೆಯ ಇಸವಿ ರೆವಿನ್ಯೂ ಇಂಡೆಕ್ಸಿನ ಪ್ರಕಾರ ಅದು ರೆವಿನ್ಯೂದವರಿಗೆ ಸೇರಿದೆ. ಆದರೆ ಅದು ರೆವಿನ್ಯೂ ಭೂಮಿಯಲ್ಲ ಫಾರೆಸ್ಟ್ ಭೂಮಿಯೆಂಬುದು ಫಾರೆಸ್ಟ್‌ನವರ ವಾದ. ಅದಕ್ಕೆ ರೆವಿನ್ಯೂ ಅಧಿಕಾರಿಗಳು ಹೌದಪ್ಪಗಳಂತೆ ತಲೆ ಕುಣಿಸುತ್ತಿದ್ದಾರೆ. ರೆವಿನ್ಯೂ ಬಕಾಸುರರು ಫಾರೆಸ್ಟಿನ ಕಾಡುಹಂದಿಗಳು ದಲಿತರ ಹೋರಾಟವನ್ನು ದಿಕ್ಕುತಪ್ಪಿಸುವ ಕುತಂತ್ರ ನಡೆಸಿದ್ದಾರೆ.

ಮೇಲ್ಕಂಡ ಸರ್ವೆನಂಬರಿನ ಪ್ರದೇಶದಲ್ಲಿ ಬೆಲೆ ಬಾಳುವ ಯಾವುದೇ ಮರಗಳಿಲ್ಲ. ಅದೊಂದು ಕುರುಚಲು ಗಿಡಗಳ ಕಾಡು. ದಲಿತರು ಈ ಭೂಮಿಯನ್ನು ಹಸನುಗೊಳಿಸಿದ್ದಾರೆ. ಅಲ್ಲದೆ ಕುರುಚಲು ಗಿಡ ಕಡಿದ ಕಡೆ ಗುಡಿಸಲು ಗಳೇಳಿಸುತ್ತಿದ್ದಾರೆ. ಕಾಡುಕಡಿಯುವ ಕೆಲಸ ಶುರುವಾದ ಹೊಸತರಲ್ಲಿ ರೆವಿನ್ಯೂ ಅಧಿಕಾರಿಗಳ ದಂಡೇ ಇಲ್ಲಿಗೆ ಬಂದು ಕಾಡು ಕಡಿಯುವ ಕೆಲಸ ನಿಲ್ಲಿಸಿರೆಂದು ಬಡವರ ಹತ್ತಿರ ಮನವಿ ಮಾಡಿಕೊಂಡಿತು. ಇಲ್ಲಿಂದ ಬೇರೆ ಕಡೆಗೋಗುವುದಾದರೆ ಭೂಮಿ, ಎತ್ತುಗಾಡಿ ಹೆಂಚು ಗಳ ಮನೆ–ಇತ್ಯಾದಿ ಗಳೆಲ್ಲವನ್ನು ಮುಫತ್ತಾಗಿ ಕೊಡಿಸುವುದಾಗಿ–ತಾಸೀಲ್ದಾರ್

ಗಣೇಶ್

AC. DCಗಳು ಹೇಳಿದರೂ, ಜನರು ಭರವಸೆಗಳ ನಂಬಿ ಕೂರಲು ತಯಾರಿರಲಿಲ್ಲ. ಅವರೆಲ್ಲ ಬಂದದಾರಿಗೆ ಸುಂಕವಿಲ್ಲವೆಂದು ತೆರಳಿದರು.

ಅದೇ ದಿನ ಅಂದರೆ 20–2–1983 ರಂದು ಅಲ್ಲಿಗೆ ಬಂದ ಫಾರೆಸ್ಟರ್ ಶಿವಣ್ಣೇಗೌಡ ಎಂಬುವರು ಕೈಲಿದ್ದ ಬಂದೂಕವನ್ನು ಅಲ್ಲಿದ್ದ ಜನರಿಗೆ ತೋರಿಸುತ್ತಾ "ಹೊಲೆಮಾದಿಗ ನನ್ಮಕ್ಕಳಾ ಭೂಮಿ ಬೇಕಾ ನಿಮಗೆ? ನೀವು ಗೌಡರಟ್ಟಿ ಬಚ್ಚಲು ಬಳಿಯಲು ಲಾಯಕ್ಕು" ಎಂದು ಅರ್ಭಟಿಸಿದರು.

ಗೌಡರ ಅರ್ಭಟಕ್ಕೆ ಅಲ್ಲಿ ಕಾಡು ಕಡಿಯುತ್ತಿದ್ದ ಹೆಂಗಸರು ಮಕ್ಕಳಾದಿಯಾಗಿ ಯಾರೂ ಕೇರು ಮಾಡಲಿಲ್ಲ. ಅದ ಕಂಡು ತಣ್ಣಗಾದ ಗೌಡರು ಕಳ್ಳಬೆಕ್ಕಿನ ಹಾಗೆ ಹಿಂದೆ ಸರಿದರು. ನಂತರ 23-2-83 ರಂದು ಜನರ ಮೇಲೆ ಆನೆಗಳ ಬಿಟ್ಟು ಅವರು ಓಡಿ ಹೋಗುವಂತೆ ಮಾಡಲು ಕಾಡು ಇಲಾಖೆಯ ಹೆದ್ದರು ಪ್ರಯತ್ನಿಸಿದರು. ಅದಕ್ಕೂ ಹೋರಾಟಗಾರರು ಜಗ್ಗಲಿಲ್ಲ. ಹೋರಾಟ ತೀವ್ರವಾಗಿ ಮುಂದುವರಿದಿದೆ.

ಮೇಲ್ಕಂಡ ಭೂ ಆಕ್ರಮಣ ಚಳುವಳಿ ಇದ್ದಕ್ಕಿದ್ದಂತೆ ಬೇಕೆಂತಲೇ ಶುರುವಾದ್ದಲ್ಲ. ಕಳೆದ ಹತ್ತಾರು ವರ್ಷಗಳಿಂದ ತುಂಡು ಭೂಮಿಯ ಆಸೆಗೆ ರೆವಿನ್ಯೂ ಲಂಚಕೋರರಿಗೆ ಸಾವಿರಾರು ರೂಪಾಯಿಗಳ ಲಂಚ ಕೊಟ್ಟು ಇಲ್ಲಿನ ದಲಿತರು ಫಲ ಕಾಣದೆ ನಿಂತಿದ್ದರು. ರೆವಿನ್ಯೂ ಇನ್ಸ್‌ಪೆಕ್ಟರುಗಳು, ವಿಲೇಜ್‌ಅಕೌಂಟೆಂಟುಗಳು ಮುಂತಾಗಿ ಅನೇಕರ ಜೇಬು ತುಂಬಿದ್ದರು. ಕೊನೆಗವರು ಎಲ್ಲ ಕಳಕೊಂಡು ರೋಸಿ ನಿಂತಿದ್ದರ ಫಲ ಈ ಭೂ ಆಕ್ರಮಣ ಚಳುವಳಿ. ಒಪ್ಪತ್ತಿನ ಕೂಳಿಲ್ಲದೆ ಕೊರಗುತ್ತಿರುವ ಈ ಜನರು ಹೋರಾಟದ ಮೂಲಕ ಒಂದಾಗಿದ್ದಾರೆ. ಪ್ರಜಾಪ್ರಭುತ್ವವಾದಿ ಜನತಾಸರ್ಕಾರ ಬಡಜನರ ಈ ಪ್ರಾಮಾಣಿಕ ಹೋರಾಟವನ್ನು ಬೆಂಬಲಿಸುತ್ತದೆಂದು ನಂಬಿದ್ದೇವೆ.

ಜಾತಿವಿನಾಶ

(3 ನೇ ಪುಟದಿಂದ)

ಯಾವ ನಾಯಕರು ಕ್ರಿಯಾಶೀಲ ರಾಜಕೀಯದಿಂದ ದೂರ ಓಡಿ ಸ್ವಪ್ರಾಬಲ್ಯಕ್ಕಾಗಿ ಕೆಲಸ ಮಾಡುತ್ತಾರೋ ಅಂಥವರನ್ನು ಬಿಡದೆ ಎಚ್ಚರಿಸಬೇಕು. ಹಿಂದುಳಿದ ಜಾತಿಯನ್ನು ತನ್ನ ಸಮೂಹದಲ್ಲಿ ಅಭಿವೃದ್ಧಿಗೊಳಿಸಲು ಸ್ವಗೌರವ ಮತ್ತು ನಿರ್ಭಯತೆಗಳು ಕೇವಲ ಬಿಸಿಲ್ಗುದುರೆ.

ಜಾತಿ ಪದ್ಧತಿಯನ್ನು ದಾಳಿ ಮಾಡುವ ರಾಜಕೀಯ ಕಾರ್ಯಕ್ರಮವು ಸಹಪಂಕ್ತಿ ಭೋಜನ ಇತ್ಯಾದಿ ಸಾಮಾಜಿಕ ಚಟುವಟಿಕೆಗಳ ಜತೆಗೂಡಬೇಕು. ಆಹಾರ ಪದ್ಧತಿಯಿಂದ ಜಾತಿಗಳನ್ನೂ ವಿಂಗಡಿಸುವುದು ಒಬ್ಬ ಸಮಾಜವಾದಿಗೆ ಅಸಂಭವನೀಯವಾಗುತ್ತಿದ್ದರೂ ಅಂತರ್ಜಾತಿ ವಿವಾಹಗಳನ್ನು ಶಾಸನಬದ್ಧವಾಗಿಸುವ ಕಾರ್ಯಕ್ರಮವೊಂದನ್ನು ರೂಪಿಸುವ ಕಾಲವಿನ್ನೂ ಪಕ್ವವಾಗಿಲ್ಲ. ಸಾಹಿತ್ಯ, ನಾಟಕ, ಮೇಳ ಮತ್ತು ಕ್ರೀಡೆಗಳು ಯುವಜನಾಂಗದ ಸಾಂಸ್ಕೃತಿಕ ವಿನಿಮಯ ಮತ್ತು ಪ್ರಸಾರಕ್ಕೆ ಮಾಧ್ಯಮಗಳಾಗಬಲ್ಲವು. ಈಗ, ಮೇಲು ಜಾತಿಗಳಿಗೆ ಶ್ರೇಷ್ಠತೆಯೇ ಪ್ರತ್ಯೇಕ ಪಿತ್ರಾರ್ಜಿತ ಆಸ್ತಿಯಾಗಿ ಶ್ರಮಿಕ ಜೀವನ ಕೆಳಜಾತಿಯವರಷ್ಟೇ ಪಡೆದಿದ್ದು ತತ್ಪಲವಾಗಿ ಪ್ರತಿಭೆ ಮತ್ತು ಚೈತನ್ಯ ಎರಡೂ ನಮ್ಮ ರಾಷ್ಟ್ರ ಜೀವನದಲ್ಲಿ ಕ್ಷೀಣ ದೆಶೆಯಲ್ಲಿವೆ.

ನೇರವಾಗಿ ಜಾತಿ ಪದ್ಧತಿಯ ಮೇಲೆ ಯುದ್ಧ ಹೂಡುವುದು ಪ್ರಯೋಜನವಿಲ್ಲವೆಂಬ ಆಲೋಚನೆಗೆ ಕೆಲವರು ಒಲಿಯುತ್ತಾರೆ ; ವರ್ಗಸಮರದಿಂದ ಬಂಡವಾಳಶಾಹಿ ನಾಶವಾದರೆ ಜಾತಿಗಳು ತಂತಾನೆ ನಿರ್ಗಮಿಸುತ್ತವೆಂದು. ಮೊದಲನೆಯದಾಗಿ, ಜಾತಿ ಪದ್ಧತಿಯಿಂದ ಶಾಪಗ್ರಸ್ತವಾಗಿರುವ ಒಂದು ದೇಶದಲ್ಲಿ ಪಾಳೆಯಗಾರಶಾಹಿ ಮತ್ತು ಬಂಡವಾಳಶಾಹಿ ಅಸಮಾನತೆಗಳನ್ನ, ವರ್ಗಸಮರ ವೊಂದರಿಂದಲೇ ಕೊನೆಗಾಣಿಸಲು ಸಾಧ್ಯವಿಲ್ಲ. ಅಲ್ಲದೆ, ಅವರು ಭಾವಿಸುವಂತೆ ವರ್ಗರಹಿತ ಸಮಾಜ ಸ್ಥಾಪನೆಗೆ ವರ್ಗಸಮರ ಅನಿವಾರ್ಯವಾದಂತೆ, ಜಾತಿಸಮರವು ಜಾತಿ ರಹಿತ ಸಮಾಜ ಸೃಷ್ಟಿಗೆ ಯಾಕಾಗಬಾರದು? ಹಳೆಯ ಶಾಸ್ತ್ರಾಧಾರ ರೀತಿಯ ವರ್ಗ ಮತ್ತು ಜಾತಿ ಸಮರಗಳಿಗೆ ಚಾಲನೆ ಕೊಡುವುದು ಬೇಡ, ಜಾತಿ ಮತ್ತು ವರ್ಗ ನಾಶವು ಅಹಿಂಸಾತ್ಮಕ, ಶಾಂತಿಯುತ ಮಾರ್ಗಗಳಲ್ಲಿ ಪ್ರಚಾರ, ಸಂಘಟನೆ ಮತ್ತು ಹೋರಾಟಗಳ ಗುರಿಹೊಂದಲಿ.

ಈ ಜಾತಿ ನೀತಿಯನ್ನು ಪ್ರಚಾರ ಪಡಿಸುವುದು ಮತ್ತು ಕಾರ್ಯಗತ ಮಾಡುವಾಗ ಅಪಾರ್ಥಕ್ಕೊಳಗಾಗ ಬೇಕಾದ ಎಚ್ಚರವಿದೆ. ಕೆಲವರು ತಪ್ಪು ಗ್ರಹಿಕೆಯಿಂದಲ್ಲವಾದರೂ ಪ್ರವೃತ್ತಿ ಮೂಲವಾಗಿ ಇದನ್ನು ದ್ವಿಜ–ವಿರೋಧಿ ನೀತಿ ಎಂದು ಭಾವಿಸುತ್ತಾರೆ. ಜಾತಿಯ ಬೀಸುವ ಕಲ್ಲುಗಳು ಮೊದಲು ಕೆಳ ಜಾತಿಯವರನ್ನು ಮುಗಿಸಿ ಆ ಮೇಲೆ ಮೇಲಿನ ಜಾತಿಯವರನ್ನು ಬೀಸಿ ಎರಡು ಭಾಗ ಮಾಡುತ್ತವೆ. ದಿನಕ್ಕೆ 50ರೂ.ಗೀತಲೂ ಹೆಚ್ಚು ವರಮಾನ ಬರುವ ಮೇಲ್ಜಾತಿಯ ದ್ವಿಜ, ಅವನ ಉಡುಗೆ ತೊಡುಗೆಗಳು ಪಾಳೆಗಾರ ರೀತಿಯ ಶೇರ್ವಾನಿ, ಚುಡಿದಾರ್ ಪೈಜಾಮ ಮತ್ತು ಅವರ ಮಕ್ಕಳು ಪ್ರಾರಂಭದಿಂದಲೇ 'ಡ್ಯಾಡಿ' ಮಮ್ಮಿ'ಯ ದಬ್ಬಾಳಿಕೆಯ ಭಾಷೆಯನ್ನೆ ಮಾತಾಡುತ್ತಿರುತ್ತವೆ; ಮತ್ತು ಕೆಳ ಜಾತಿಯ ದ್ವಿಜರು ಸಾಮಾನ್ಯ ಕೆಲಸಗಾರರು, ಜನತಾ ಉಡುಪುಗಳನ್ನು ತೊಡುತ್ತಾರೆ. ಕೆಳಜಾತಿ ದ್ವಿಜರು ತಮ್ಮ ಉಚ್ಚ ಅವಶೇಷ [ಮೇಲು ಜಾತಿ ದ್ವಿಜ] ಗಳ ಕಡೆಗೆ ನೋಡುವ ರೋಗ ಪೀಡಿತರಾಗಿದ್ದಾರೆ. ಕೆಳಜಾತಿಯ ದ್ವಿಜರು–ಹಿಂದುಳಿದ ಜಾತಿಗಳು, ಶೂದ್ರರು, ಹರಿಜನರು, ಮಹಿಳೆಯರು, ಮುಸ್ಲಿಮರು ಮತ್ತು ಆದಿವಾಸಿಗಳ ಕಡೆಗೆ ನೋಡಲು ಪ್ರಾರಂಭಿಸಿದಾಗ ಜಾತಿ ಚಕ್ರವು ಒಡೆಯುತ್ತದೆ. ಆಗ ನಮ್ಮ ಜನಸಂಖ್ಯೆಯ ಶೇ. 85ಕ್ಕೆ ಬಡಿದಿರುವ ಪೂರಸೆಟಿ ರೋಗ ಶೇ. 15ಕ್ಕೆ ಹಿಡಿದಿರುವ ಅರಸೆಟಿ ರೋಗ ಒಟ್ಟಾಗೇ ಗುಣಪಡುತ್ತವೆ, ಶೋಷಣೆ ಅಂತ್ಯಗೊಳ್ಳುತ್ತದೆ. ಮತ್ತು ಇಂಡಿಯಾ ಎಲ್ಲಾ ಭಾಗಗಳಲ್ಲೂ ಬಲಗೊಳ್ಳುತ್ತದೆ.

ಹಸಿರೊಡಲಿನ ಕ್ರಾಂತಿ ಪತಾಕೆಗಳು

ಮುಳ್ಳೂರು ನಾಗರಾಜ

ಪ್ರೀತಿಯ ಗೆಳತಿ ನೀನು
ಕ್ರಾಂತಿಕಾರಿ ಕವಿಯ ಕನಸುಗಳಲ್ಲಿ
ಅರಳಿದ ಕಾವ್ಯದ ಹೂ
ರಾತ್ರಿ ಮೌನದಲ್ಲಿ ನೆನಪಿನಂಗಳದಲ್ಲಿ
ಒಲುಮೆ ಹಾಡುಕ್ಕಿಸುವ
ಗುಲಾಬಿ ಕೋಗಿಲೆ
ನಿನ್ನಂದ ಚಂದಕೆ ಮರುಳಾದೆ ನಾನು
ನಿನ್ನ ದನಿಗೆ ದನಿ ತೆತ್ತೆ ಕಾಣೆ
ನಿನ್ನೊಡಲು ಕುಲುಮೆ ನಾನಾದೆ ಚೆಲುವೆ
ಕತ್ತಲೆಯ ಲೋಕದಲಿ ದುಃಖಿಗಳ ನಾಡಿನಲಿ
ಬೆಳದಿಂಗಳಾಗಿ ಅರಳಿದವಳೆ

ಯಾತನೆಗೆ ಮಾತುಗಳ ಕೊಟ್ಟಂಥ ನೀನು
ಮಿಂಚು ಮಲ್ಲಿಗೆ ಮುಡಿದು
ಹೊಸ ಸೀರೆ ಧರಿಸಿ ವೈಯ್ಯಾರದಿಂದ
ಮಸಣಗಳ ನಡುವೆ ಯಾಕಲೆಯುತಿರುವೆ?
ನೀನು ಸ್ವಪ್ನಮತ್ತರ ಹೃದಯದಲ್ಲಿ
ಈ ರಕ್ತ ಸರೋವರನಲ್ಲಿ ಅರಳಿದ
ಒಂದು ಸುಂದರ ಕೆಂದಾವರೆ
ಈ ಕಲ್ಲಿನಲ್ಲಿ ಈ ಮಣ್ಣಿನಲ್ಲಿ
ನನ್ನವರ ದನಿ ಸಲೆಯೊಡೆಯುತಿಹುದವ್ವ
ಚೆಲುವೆ ನನ್ನ ಕಾವ್ಯ ಕನ್ನಿಕೆ
ಬೆಂದ ಮನೆಗಳು ನೊಂದ ಮನಗಳು

ಬಾನ ನೆಕ್ಕುವ ಬೆಂಕಿ ಶಿಖರವು
ನಮ್ಮ ನೋವಿನ ಕಾವ್ಯ
ಗೋಡೆಗಳ ಬುಡದಲ್ಲಿ ನಾವು
ನಾಳೆ ಮೂಡುವ ಸಿಡಿಲುಗಳು
ಕಡು ನೋವಿನ ಕಡಲುಗಳು
ನಾವು ಹರಿವ ಪ್ರೇಮದ ಝರಿಗಳು
ಈ ಮಣ್ಣಿನ ಹೂಗಳು
ಈ ನಾಡಿನ ಪ್ರೇಮಿಗಳು
ಹೊಸ ಕಾವ್ಯದ ಹೊಸಲೋಕದ
ಹಸಿದವರೊಡಲಿನ
ಕ್ರಾಂತಿಪತಾಕೆಗಳು

ರಾಯಚೂರಿನ ಬರಡು ನೆಲದಲ್ಲಿ ದ. ಸಂ. ಸ. ಚಿಗುರು

ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದ ರಾಯಚೂರು ಅನೇಕ ವಿಶಿಷ್ಟ ಅಂಶಗಳ ಸಮ್ಮಿಲನ. ಹೈದರಾಬಾದ್ ಕರ್ನಾಟಕಕ್ಕೆ ಸೇರಿದ ಈ ಜಿಲ್ಲೆ ನಿಜಾಂಷಾಹಿಯ ಊಳಿಗ ಮಾನ್ಯ ವ್ಯವಸ್ಥೆಯ ಕುರುಹು. ಕೃಷ್ಣಾ ಮತ್ತು ತುಂಗಭದ್ರೆಯರಿಂದ ಆವೃತವಾಗಿರುವ ಈ ಪ್ರದೇಶ ಅತಿ ಬಿಸಿಲಿನಿಂದ ಯಾವಾಗಲು ಉರಿಯುವ ಜಿಲ್ಲೆ. ಪಶ್ಚಿಮ ಭಾಗ ಇತ್ತೀಚಿಗೆ 'ಹಸಿರುಕ್ರಾಂತಿ' ಯನ್ನು ಕಂಡಿದ್ದರೆ, ಪೂರ್ವಭಾಗ ಹೆಚ್ಚುಕಮ್ಮಿ ತೆಲಂಗಾಣದ ವಿಸ್ತರಣೆಯಷ್ಟೆ. ಆದರೆ ಇತಿಹಾಸ ಪ್ರಸಿದ್ಧ ತೆಲಂಗಾಣ ಹೋರಾಟದ ಪ್ರಭಾವವೇನೂ ಇಲ್ಲ. ಸಾಂಸ್ಕೃತಿಕವಾಗಿ ಇಸ್ಲಾಂ ಹಿಂದೂ ಪರಂಪರೆಗಳ ಸಮ್ಮಿಲನ ಎಲ್ಲೆಲ್ಲೂ ಎದ್ದು ಕಾಣುತ್ತದೆ. ರಾಜಕೀಯವಾಗಿಯೂ ಬರಡಾಗಿರುವ ಈ ಜಿಲ್ಲೆ ಯಾವುದೇ ಪ್ರಬಲ ಉದಾರವಾದಿ ಪರಂಪರೆ ಹೊಂದಿಲ್ಲ. ದಲಿತರನ್ನಂತೂ ಯಾವುದೇ ರಾಜಕೀಯ ಸಂಘಟನೆ ತಲುಪಿಲ್ಲ. ಈ ಹಿಂದೆ ಪಂಡಿತ ತಾರನಾಥರು ದಲಿತರಿಗಾಗಿ ಸ್ವಲ್ಪ ಕೆಲಸ ಮಾಡಿದಷ್ಟೇ ಪ್ರಗತಿ ಪರ ಇತಿಹಾಸ. ಈ ಹಿನ್ನೆಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಹಲವಾರು ದಲಿತ ಯುವಕರು ದ.ಸಂ.ಸ.ವನ್ನು ಸಂಘಟಿಸುತ್ತಿದ್ದಾರೆ.

ಹೊಸ ತಲೆಮಾರಿನ ದಲಿತ ಯುವಕರಿಗೆ ತರಬೇತಿ ನೀಡಲು ದಸಂಸ ದೇವನಪಲ್ಲಿ ಗ್ರಾಮದಲ್ಲಿ ಫೆಬ್ರವರಿ ಮಾಹೆ 26 ಮತ್ತು 27ರಂಡು ತರಬೇತಿ ಶಿಭಿರವನ್ನು ಸಂಘಟಿಸಿತ್ತು. ಇದಕ್ಕೆ ನೆರೆಯ ಜಿಲ್ಲೆಯಾದ ಗುಲ್ಬರ್ಗದಿಂದ ಅನೇಕ ಯುವಕರು ಬಂದಿದ್ದರು.

ಶಿಭಿರ ನಡೆದಿದ್ದು ರಾಯಚೂರಿನಿಂದ 12ಕಿ.ಮೀ ದೂರವಿರುವ ದೇವನಪಲ್ಲಿ ಗ್ರಾಮದಲ್ಲಿ. ಈ ಹಿಂದೆ ಇದೇ ಊರಿನಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದಿದ್ದಾಗ ದಸಂಸ ಹೋರಾಡಿ ಪರಿಹಾರ ದೊರಕಿಸಿತ್ತು. ಹೀಗಾಗಿ ಶಿಭಿರಕ್ಕೆ ಸ್ಥಳೀಯ ಜನರ ಬೆಂಬಲ. ಸಹಕಾರವಿತ್ತು. ಪಾಳು ಮಸೀದಿಯಲ್ಲಿ ಬಿಸಿಲಿನ ಬೇಗೆಯಲ್ಲಿ ಶಿಬಿರವು 26ರ ಬೆಳಿಗ್ಗೆ ವೆಂಕಟೇಶರವರ ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು. ಅವರು 'ನಾವೆಲ್ಲ ಹಾಡ್ಯಾದ ದಿ॥ ಸೋಮಶೇಖರ್‌ನಂತಹ ಕಾರ್ಯಕರ್ತರಾಗಬೇಕು, ಸೋಮಶೇಖರನ ಛಲ, ಅರ್ಪಣಾ ಮನೋಭಾವ ನಮಗೆಲ್ಲರಿಗೂ ದಾರಿಯಾಗಲಿ' ಎಂದು ಕರೆ ನೀಡಿದರು. ನಂತರ ಬಿ. ಕೃಷ್ಣಪ್ಪನವರು 'ರಾಜಕೀಯ ಪಕ್ಷಗಳು ಮತ್ತು ದಸಂಸದ ಅನಿವಾರ್ಯತೆ' ಎಂಬ ವಿಷಯಬಗ್ಗೆ ವಿವರವಾಗಿ ಮಾತನಾಡಿದರು. ವಿವಿಧ ರಾಜಕೀಯ ಪಕ್ಷಗಳ ನಿಲುವುಗಳನ್ನು ವಿವರಿಸುತ್ತಾ, ಆವರು ಬಲ ಪಕ್ಷಗಳು ನಮ್ಮ ಶತ್ರುಗಳು ಮತ್ತು ಎಡಪಕ್ಷಗಳು ನಮ್ಮ ಸ್ನೇಹಿತರು ಎಂದರು. ಆದರೆ ಈ ಸ್ನೇಹ ಅವರೊಡನೆ ಐಕ್ಯವಾಗುವಂತಹದ್ದಲ್ಲ ಬದಲಾಗಿ ನಾವು ನಮ್ಮ ಸ್ವತಂತ್ರತೆಯನ್ನು ಉಳಿಸಿಕೊಳ್ಳುವಂತಹದ್ದು. ಇದಕ್ಕೆ ಕಾರಣ ಈ ಪಕ್ಷಗಳಿಗೆ ಜಾತಿ ಸಮಸ್ಯೆಯ ಬಗ್ಗೆ ನಿರ್ದಿಷ್ಟ ನಿಲುವು ಇಲ್ಲವೆಂದರು. ಮಧ್ಯಾಹ್ನದ ಅಧಿವೇಶನದಲ್ಲಿ 'ಅಂಬೇಡ್ಕರ್‌ರವರ ಪ್ರಸ್ತುತತೆ' ಎಂಬ ವಿಷಯವಾಗಿ ಮಾತನಾಡುತ್ತಾ ಡಾ॥ ವಿ. ಲಕ್ಷ್ಮೀ ನಾರಾಯಣರು ಅಂಬೇಡ್ಕರ್‌ರವರ ಹೋರಾಟ ಒಂದು ಚಾರಿತ್ರಿಕ ಘಟ್ಟದಲ್ಲಿ ಮಹಾನ್ ಆದದ್ದು. ಆದರೆ ಅಂಬೇಡ್ಕರ್‌ರವರಿಗೂ ಸಹ ತಮ್ಮದೇ ಆದ ಭೂರ್ಜ್ವಾ ಉದಾರವಾದದ ಮಿತಿಯಿತ್ತು. ಇಂದು ದಲಿತ ಚಳುವಳಿಗಳು ಅಂಬೇಡ್ಕರ್‌ರವರ ಜಾತಿಪದ್ಧತಿಯ ವಿರುದ್ಧದ ಆಕ್ರೋಶ ಮತ್ತು ಸಮಾಜವಾದದ ಆಶಯಗಳನ್ನು ವೈಜ್ಞಾನಿಕವಾಗಿ ಮೈಗೂಡಿಸಿಕೊಂಡು ಬೆಳೆಯಬೇಕೆಂದರು.

27ರ ಬೆಳಗಿನ ಅಧಿವೇಶನದಲ್ಲಿ ಗಂಗಾರಾಮ್ ಚಂಡಾಳ್‌ರವರು 'ದಲಿತ ಸಂಘಟನೆಗಳಲ್ಲಿವಿದ್ಯಾರ್ಥಿಗಳ ಪಾತ್ರ' ಎಂಬ ವಿಷಯವಾಗಿ ಮಾತನಾಡುತ್ತಾ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಬಗ್ಗೆ ಹೋರಾಡುತ್ತಾ, ದಲಿತರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಂಘಟನೆ ಮಾಡಬೇಕೆಂದು ಕರೆಯಿತ್ತರು. ಶಿಸ್ತು, ಅಧ್ಯಯನ ಶೀಲತೆ ವಿದ್ಯಾರ್ಥಿಗಳಿಗೆ ಅವಶ್ಯವೆಂದರು. ಮಧ್ಯಾಹ್ನದ ಅಧಿವೇಶನದಲ್ಲಿ ವೆಂಕಟೇಶ್‌ರವರು 'ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಪರಿಹಾರ' ಎಂಬ ವಿಷಯವಾಗಿ ಮಾತನಾಡುತ್ತಾ, ಅಂಬೇಡ್ಕರವರು ಜಾತಿಯ ಉಗಮದ ಬಗ್ಗೆ ಮಾಡಿದ ವಿಶ್ಲೇಷಣೆಯನ್ನು ಮಂಡಿಸಿದರು. ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಹೋರಾಡುವಾಗ ಇತರ ಜಾತಿಯ ಬಡವರ ಬೆಂಬಲ ಅವಶ್ಯವೆಂದರು.

ಕೊನೆಯಲ್ಲಿ ಶಿಭಿರಾರ್ಥಿಗಳು ತಮ್ಮ ಶಿಭಿರದ ಅನುಭವಗಳನ್ನು ಮಂಡಿಸಿದರು. ಶಿಭಿರ ಬಹಳ ಉಪಯೋಗಕಾರಿ ಎನ್ನುವುದು ಅವರ ಒಟ್ಟಾಭಿಪ್ರಾಯವಾಗಿತ್ತು. ಶಿಭಿರದಲ್ಲಿ ಫೂಲನ್ ದೇವಿಯಿಂದ ಹಿಡಿದು, ನಕ್ಸಲಿಯರು, ಆನಂದ ಮಾರ್ಗಿಗಳ ಬಗ್ಗೆ ಚರ್ಚೆ ನಡೆಯಿತು. ಒಟ್ಟಿನಲ್ಲಿ ರಾಯಚೂರಿನ ರಾಜಕೀಯ ಬರಡು ನೆಲದಲ್ಲಿ ದ.ಸಂ.ಸ ಚಿಲುಮೆಯಾಗಬಹುದೆಂದು ಆಸೆ ಹುಟ್ಟಿಸಿತು.

–ಲಕ್ಷ್ಮಿ

೧೮ ಮತ್ತು ೧೯ನೆಯ ಶತಮಾನದಲ್ಲಿ, ಬ್ರಿಟೀಷರ ಆಳ್ವಿಕೆಯ ಕಾಲ
ದಲ್ಲಿ, 'ಬಲಗೈ' ಮತ್ತು 'ಎಡಗೈ' ಪಂಗಡಗಳ ನಡುವೆ ಘೋರವಾದ
ಹೊಡೆದಾಟಗಳು ನಡೆದುಹೋದವು. ಇದಕ್ಕೆ ಮುಖ್ಯ ಕಾರಣ ಬ್ರಿಟಿ
ಷರು ಈ ಎರಡು ಪಂಗಡಗಳವರನ್ನು ಸಮಾನರೆಂದು ಕಂಡದ್ದು.

ಅಸ್ಪೃಶ್ಯರ ಒಳಗಿನ 'ಎಡಗೈ' ಮತ್ತ

ಜಾತಿ ಪದ್ಧತಿಯಿಂದ ಅಸ್ಪೃಶ್ಯರಿಗೆ ಆಗಿರುವ ಅನ್ಯಾಯದ ಬಗ್ಗೆ ಮಾತು ಬಂದಾಗಲೆಲ್ಲಾ ನಮ್ಮ ವಿದ್ಯಾವಂತ ಸವರ್ಣೀಯರು ಒಂದು ಪ್ರಶ್ನೆ ಕೇಳುವುದನ್ನು ಗಮನಿಸಿದ್ದೇವೆ. ಅಸ್ಪೃಶ್ಯರಲ್ಲೇ 'ಎಡಗೈ' ಮತ್ತು 'ಬಲಗೈ' ಎಂಬ ಭೇದಭಾವವಿದೆಯಲ್ಲಾ. ಅದನ್ನು ಅವರು ಇನ್ನೂ ಯಾಕೆ ಹೋಗಲಾಡಿಸಿಕೊಂಡಿಲ್ಲ ? ಎಂಬಂತಹ ಮಾತುಗಳನ್ನು ಕೇಳುತ್ತಾ ಬಂದ ನಾನು ಈ 'ಎಡಗೈ' ಮತ್ತು 'ಬಲಗೈ ಜಾತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲುಸಮಾಜಶಾಸ್ತ್ರಜ್ಞರ ಬರಹಗಳನ್ನು ಓದಿ ತಿಳಿದುಕೊಂಡ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿಕೊಟ್ಟಿದ್ದೇನೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ಅಪೇಕ್ಷಿಸುವವರು ಈ ಲೇಖನದ ಕೊನೆಯಲ್ಲಿ ಹೆಸರಿಸಿರುವ ಗ್ರಂಥಗಳನ್ನು ನೋಡಬಹುದು.

ಈ ವಿಚಾರದ ಬಗ್ಗೆ ಅತ್ಯಂತ ಆಳವಾದ ಸಂಶೋಧನೆ ಮಾಡಿರುವವರು ಅಮೆರಿಕನ್ ಸಮಾಜಶಾಸ್ತ್ರಜ್ಞ ಡಾ॥ ಬ್ರೆಂಡಾ ಇ. ಎಫ್. ಬೆಕ್ (೧೦೭೨). ಇವರ ಸಂಶೋಧನೆಯಿಂದ ತಿಳಿದು ಬಂದಿರುವ ವಿಚಾರಗಳು ಕೆಳಗಿನಂತಿವೆ :

ಸುಮಾರು ಕ್ರಿ. ಶ. ೧೦೦೦ ದಿಂದ ೧೯೦೦ ರ ವರೆಗೆ ದಕ್ಷಿಣ ಭಾರತದಲ್ಲಿ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳನ್ನು ಮಾತನಾಡುವ ಪ್ರದೇಶಗಳಲ್ಲಿನ ಸಮಾಜದಲ್ಲಿ 'ಎಡಗೈ' ಮತ್ತು 'ಬಲಗೈ' ವಿಭಜನೆ ಜಾರಿಯಲ್ಲಿತ್ತು. ಆಯಾ ಪ್ರದೇಶದ ಬ್ರಾಹ್ಮಣರು ಮತ್ತು ದೊಡ್ಡ ಜಮೀನ್ದಾರರನ್ನು ಬಿಟ್ಟು ಮಿಕ್ಕೆಲ್ಲಾ ಜಾತಿಗಳ ಜನರು ವಿಭಜನೆಯಲ್ಲಿ ಸೇರುತ್ತಿದ್ದರು. ಈ ವಿಭಜನೆಯ ವಿಶೇಷವೆಂದರೆ 'ಬಲಗೈ' ಪಂಗಡಗಳಲ್ಲಿ ಹೆಚ್ಚಾಗಿ ಕೃಷಿಕರು ಮತ್ತು ಕೃಷಿ ಕಾರ್ಯಗಳಲ್ಲಿ ಸಹಾಯಕವಾಗಿ ನಿಲ್ಲುವ ಜಾತಿಗಳ ಜನರು ಸೇರಿರುವುದು ಹಾಗೂ 'ಎಡಗೈ' ಪಂಗಡದಲ್ಲಿ ಹೆಚ್ಚಾಗಿ ಕುಶಲಕರ್ಮಿಗಳ (ಕಮ್ಮಾರ, ಚಮ್ಮಾರ, ನೇಕಾರ, ಒಡಗಿ ಇತ್ಯಾದಿ) ಜಾತಿಗಳು ಸೇರಿರುವುದು.

ಡಾ॥ ಬೆಕ್ ಅವರು ತಮ್ಮ ಸಂಶೋಧನೆಯನ್ನು ನಡೆಸಿದ್ದು (೧೯೬೫–೬೬ರಲ್ಲಿ) ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯನ್ನೊಳಗೊಂಡು ಅದರ ಸುತ್ತಮುತ್ತಲಿನ ಜಿಲ್ಲೆಗಳ ಕೆಲವು ಪ್ರದೇಶಗಳನ್ನೂ ಸೇರಿಸಿ 'ಕೊಂಗು' ಎಂದು ಕರೆಯಲಾಗಿರುವ ಭೂ ಪ್ರದೇಶದಲ್ಲಿ. ಇಲ್ಲಿ ಬ್ರಾಹ್ಮಣ ಪಂಗಡದ ಜನಸಂಖ್ಯೆ ಬಹಳ ಕಡಿಮೆ ಮತ್ತು ಅವರು ಆರ್ಥಿಕವಾಗಿ ದುಃಸ್ಥಿತಿಯಲ್ಲಿದ್ದಾರೆ. ಸಂಖ್ಯಾಬಾಹುಳ್ಯವಿರುವ ಗೌಂಡರ್ ಜನಾಂಗ (ಇವರು ಕೃಷಿಕರು) ಈ ಪ್ರದೇಶದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. ಇವರನ್ನು ಈ ಪ್ರದೇಶದ ಜನರು 'ರಾಜ' ರೆಂದು ಬಾವಿಸುತ್ತಾರೆ. ಧಾರ್ಮಿಕ ಕ್ಷೇತ್ರದಲ್ಲಿ ಭಾರತದ ಇತರ ಪ್ರದೇಶಗಳಲ್ಲಿನಂತೆ ಇಲ್ಲಿಯೂ ಬ್ರಾಹ್ಮಣರಿಗೇ ಅಗ್ರಸ್ಥಾನ. ಆದರೆ ಜಮೀನು ಮತ್ತು ಕೃಷಿ ಉತ್ಪನ್ನಗಳ ವಿಕ್ರಯಕ್ಕೆ ಸಂಬಂಧಿಸಿದ ಅಧಿಕಾರದಲ್ಲಿ ಗೌಂಡರ್‌ಗಳ ಸ್ಥಾನವೇ ಪ್ರಧಾನವಾದುದು, ಆದ್ದರಿಂದ ಲೌಕಿಕ ವಿಷಯಗಳಲ್ಲಿ ಅವರದೇ ಮೇಲುಗೈ.

ಬ್ರಾಹ್ಮಣ ಮತ್ತು ಗೌಂಡರ್ ಜಾತಿಗಳಿಗೆ ಜನರು ಈ ಸಮಾಜದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಎರಡು ಮಾರ್ಗಗಳನ್ನು ಅನುಸರಿಸಬಹುದು. ಬ್ರಾಹ್ಮಣರಂತೆ ಧಾರ್ಮಿಕ ವಿಧಿನಿಯಮಗಳಿಗೆ ಪ್ರಾಮುಖ್ಯ ಕೊಡುವುದರ ಮೂಲಕ ಅಥವಾ ಗೌಂಡರ್ ಜನಾಂಗ ಉಪಯೋಗಿಸುವ ತಂತ್ರಗಳನ್ನು ಅನುಸರಿಸಿ ಇತರ ಜಾತಿಗಳ ಜನರ ಮೇಲೆ ಅಧಿಕಾರ ಚಲಾಯಿಸುವ ಮೂಲಕ. ಎರಡನೆಯ ಮಾರ್ಗವನ್ನು ಅನುಸರಿಸುವವರು ಮಡಿ ಮೈಲಿಗೆಯ ಕಲ್ಪನೆಗಳನ್ನು ದೂರ ಸರಿಸಿ ಕೃಷಿ ಉತ್ಪಾದನೆಗೆ ಹೆಚ್ಚು ಪ್ರಾಮುಖ್ಯತೆ ಕೊಡುವುದರ ಮೂಲಕ ತಾವು ಈಗ ವಾಸಿಸುತ್ತಿರುವ ಪ್ರದೇಶಕ್ಕೆ ಅರ್ಥಾತ್ ತಮ್ಮ ಈಗಿನ ಧಣಿಗಳೊಡನಿರುವ ಸಂಬಂಧಕ್ಕೆ ಹೆಚ್ಚು ಪ್ರಾಮುಖ್ಯ ಕೊಡುತ್ತಾರೆ.

ಈ ಪ್ರದೇಶದಲ್ಲಿ 'ಎಡಗೈ' ಪಂಗಡಕ್ಕೆ ಸೇರಿದವರನ್ನು ಜನರು ತಾವು 'ಬಲಗೈ' ಪಂಗಡಕ್ಕೆ ಸೇರಿದವರೆಂದು ಹೇಳಿಕೊಳ್ಳುವ ಜನರಿಗಿಂತ ಉತ್ತಮರು ; ಯಾಕೆಂದರೆ ತಾವು ಉಚ್ಚ ವರ್ಣದವರಾದ ಬ್ರಾಹ್ಮಣರ ಜೀವನ ಕ್ರಮವನ್ನು ಅನುಸರಿಸುವವರು ಎಂದು ಹೇಳಿಕೊಳ್ಳುತ್ತಾರೆ. ಆದರೆ 'ಬಲಗೈ' ಪಂಗಡಕ್ಕೆ ಸೇರಿರುವ ಗೌಂಡರ್‌ಗಳು ಮತ್ತು ಇನ್ನಿತರರು ಇದನ್ನು ಒಪ್ಪುವುದಿಲ್ಲ. ಅವರು ಇವರನ್ನು ('ಎಡಗೈ' ಯವರನ್ನು) ವೈಶ್ಯ ಅಥವಾ ಶೂದ್ರರಂತೆ ಕಾಣುತ್ತಾರೆಯೇ ಹೊರತು ಬ್ರಾಹ್ಮಣರಂತಲ್ಲ.

ಭಾರತೀಯಸಂಪ್ರದಾಯದಲ್ಲಿ ಮನುಷ್ಯ ದೇಹದ ಬಲ ಮತ್ತು ಎಡ ಭಾಗಗಳನ್ನು ಸಮವಾಗಿ ಗಂಡು ಮತ್ತು ಹೆಣ್ಣೆಂದು ಸಾಂಕೇತಿಕವಾಗಿ ಗುರುತಿಸಲಾಗುತ್ತದೆ. (ಅರ್ಧನಾರೀಶ್ವರನ ಕಲ್ಪನೆಂ
ನ್ನು ಇಲ್ಲಿ ನೆನೆಯಬಹುದು) ವರ್ಣ ವ್ಯವಸ್ಥೆಯ
ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಹೋಲಿಸುವಾ
ಬ್ರಾಹ್ಮಣವರ್ಣ ಗಂಡಿನ ಸಂಕೇತವಾದರೆ ಕ್ಷತ್ರಿಂ
ವರ್ಣ ಹೆಣ್ಣಿನ ಸಂಕೇತವಾಗುತ್ತದೆ. ಅದೇ ರೀ
ಕ್ಷತ್ರಿಯ ಮತ್ತು ವೈಶ್ಯರನ್ನು ಹೋಲಿಸುವಾ
ಕ್ಷತ್ರಿಯನನ್ನು ಗಂಡಿನ ಸಂಕೇತವಾಗಿಯೂ, ವೈ
ನನ್ನು ಹೆಣ್ಣಿನ ಸಂಕೇತವಾಗಿಯೂ ನೋಡಲಾ
ತ್ತದೆ. (ಈ ಮಾತುಗಳನ್ನು ಡಾ॥ ಬೆಕ್ ಅವ
ಆನಂದಕುಮಾರ ಸ್ವಾಮಿಯವರ ಒಂದು ಲೇಖ
ದ ಆಧಾರದ ಮೇಲೆ ಹೇಳಿದ್ದಾರೆ.)

ಮಡಿವಂತಿಕೆ ಮತ್ತು ಒಕ್ಕಲುತನದ ಒಲವುಗ
ಮೇಲೆ ಈ ವಿಭಜನೆ ('ಎಡಗೈ' ಮತ್ತು 'ಬಲಗೈ
ನಿಂತಿದೆಯೇ ಎಂದು ನೋಡಲು ಡಾ॥ ಬೆಕ್ ಅ
ರು ಈ ಪ್ರದೇಶದಲ್ಲಿರುವ ಹದಿನಾರು ಜಾತಿಗಳಿ
ಸೇರಿದ ಜನರು ಹತ್ತು ಅಂಶಗಳನ್ನು ತಮ್ಮ ನಿ
ಜೀವನದಲ್ಲಿ ಹೇಗೆ ಅಳವಡಿಸಿಕೊಂಡಿದ್ದಾರೆಂದ
ನೋಡಿ ಅವರು ಯಾವ ಪಂಗಡಕ್ಕೆ ಹತ್ತಿರವಾ
ತ್ತಾರೆಂದು ತಾಳೆ ಮಾಡಿದ್ದಾರೆ. ಈ ಹತ್ತು ಅ
ಶಗಳು, ಆಹಾರ, ಕುಲದೇವತೆ, ಕುಲದ ಸಂಘಟ
ಬಾಂಧವ್ಯ ಪರಿಭಾಷೆ, ವಂಶದ ಪರಿಭಾಷೆ, ವಿವಾ
ಕ್ಕೆ ಸಂಬಂಧಿಸಿದ ವಿಧ್ಯುಕ್ತ ಕ್ರಿಯೆಗಳು, ಹೆಣ್ಣಿ
ಕಟ್ಟುವ 'ತಾಳಿ'ಯ ನಮೂನೆ, ಸೀರೆಯನ್ನು ಉ
ವ ರೀತಿ, ಜನಿವಾರ ಧಾರಣೆ, ವಿಧವೆಯ ವಸ್ತ್ರ
ಬಣ್ಣ ಇತ್ಯಾದಿಯನ್ನು ಒಳಗೊಂಡಿದೆ. ಶಾ
ಗ್ರಂಥಗಳಲ್ಲಿ ಬ್ರಾಹ್ಮಣ ವರ್ಣದಿಂದ ಕ್ಷತ್ರಿಂ
ವರ್ಣವನ್ನು ಬೇರ್ಪಡಿಸಲು ಉಪಯೋಗಿಸು
ಅಂಶಗಳನ್ನು ಮೇಲಿನ ಅಂಶಗಳು ಸ್ವಲ್ಪ ಹೋ
ತ್ತವೆ.

ಈ ಪ್ರಮಾಣಗಳನ್ನು ಉಪಯೋಗಿಸಿಕೊಂ
ಡಾ॥ ಬೆಕ್ ಅವರು ಒಂದು ಗ್ರಾಫ್ ತಯಾರಿಸಿದ
ರೆ. ಈ ಗ್ರಾಫಿನಿಂದ ತಿಳಿದು ಬಂದ ವಿಚಾರಗ
ಹೀಗಿವೆ : ಈ ಪ್ರದೇಶದಲ್ಲಿ ಮೇಲು ಜಾತಿಗಳೆಂ
ಗುರುತಿಸಲಾಗುವ ಜಾತಿಯವರೆಲ್ಲಾ ಈ ಎರ
ಪಂಗಡಗಳಲ್ಲಿ ('ಎಡಗೈ' ಮತ್ತು 'ಬಲಗೈ') ಒಂ
ರಲ್ಲಿ ಖಚಿತವಾಗಿ ಸೇರುತ್ತಾರೆ. ಆದರೆ ಜಾ

ಶ್ರೇಣಿಯ ಕೆಳಭಾಗದಲ್ಲಿರುವ ಜಾತಿಗಳ ಒಲವು ಅಷ್ಟು ಖಚಿತವಾಗಿರುವುದಿಲ್ಲ. ಅವರ ಆಚರಣೆಗಳಲ್ಲಿ ಎರಡೂ ಪಂಗಡಗಳ ಆಚರಣೆಗಳ ಸಮ್ಮಿಶ್ರವನ್ನು ಕಾಣಬಹುದು. ಸಾಮಾಜಿಕ ಮತ್ತು ಆರ್ಥಿಕ ಪ್ರತಿಷ್ಠೆಗಳಿಂದ ವಂಚಿತರಾದವರು ಎರಡು

ಹೊಡೆದಾಟದಲ್ಲಿ ತೊಡಗಿದ್ದುದು? ಇದಕ್ಕೆ ಡಾ॥ ಬೆಕ್ ಅವರು ಎರಡು ಕಾರಣಗಳನ್ನು ಕೊಡುತ್ತಾರೆ. ಸಮಾಜದ ಕಟ್ಟುಪಾಡುಗಳ ಬಗ್ಗೆ ಮಾನಸಿಕವಾಗಿ ಅನಿಶ್ಚಿತವಾಗಿರುವವರೇ ತಮ್ಮ ಬಾಹ್ಯ ಆಚರಣೆಗಳಲ್ಲಿ ಇದೇ ಕಟ್ಟುಪಾಡುಗಳಿಗೆ ತಾವು ಇತರರಿ

ಲಗೈ’: ಒಂದು ಸಂಶೋಧಕ ಚಿಂತನೆ

ಸಂಗ್ರಹ : **ಸಂಗ್ರಾಹಿ**

ಪಂಗಡಗಳೊಡನೆ ಹೊಂದಿಕೊಂಡಿರುವುದು ಅನಿವಾರ್ಯವಾಗಿರುವುದೇ ಇದಕ್ಕೆ ಕಾರಣವಾಗಿರಬಹುದು. ಈ ಶ್ರೇಣಿಯಲ್ಲಿ ತೀರ ಕೆಳಭಾಗದಲ್ಲಿರುವವರ ಒಲವು ಹೆಚ್ಚಾಗಿ ಇರುವುದು ‘ಬಲಗೈ’ ಜಾತಿಯವರೊಡನೆಯೇ ಎಂದು ಕಂಡುಬರುತ್ತದೆ. ಈ ಜಾತಿಗಳ ಜನರು ಕೃಷಿಕಾರ್ಮಿಕರಾಗಿ ದುಡಿದು ನಂತರ ಉಳಿದ ಸಮಯದಲ್ಲಿ ತಮ್ಮ ಕುಲಕಸುಬಿನಲ್ಲಿ ತೊಡಗುವುದು ಇದಕ್ಕೆ ಒಂದು ಕಾರಣ. ಇನ್ನೊಂದು ಮುಖ್ಯ ಅಂಶವೆಂದರೆ ಒಕ್ಕಲುತನದ ಒಲವಿರುವ ಪಂಗಡದಲ್ಲಿ ಏಕರೂಪತೆ ಇದ್ದುದು ಮತ್ತು ಮಡಿವಂತಿಕೆಯ ಒಲವಿರುವವರಲ್ಲಿ (‘ಎಡಗೈ’ ಪಂಗಡದಲ್ಲಿ) ಹೆಚ್ಚು ಭಿನ್ನತೆ ಇರುವುದು ರಾಜಕೀಯ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಆಳುವ ವರ್ಗ ಮತ್ತು ಅದಕ್ಕೆ ವಿರುದ್ಧವಾಗಿ ನಿಲ್ಲುವ ವಿರೋಧಿ ಗುಂಪುಗಳಲ್ಲಿ ಕಂಡುಬರುವ ಲಕ್ಷಣಗಳೇ

ಇಲ್ಲೂ ಕಾಣುತ್ತವೆ ಎಂದು ಹೇಳಬಹುದು. ಮಡಿವಂತಿಕೆಯ (ಬ್ರಾಹ್ಮಣ್ಯದ) ಒಲವಿರುವವರನ್ನು ಒಟ್ಟುಗೂಡಿಸುವ ಒಂದೇ ಅಂಶವೆಂದರೆ ಅವರು ಗೌಂಡರ್ ಜನಾಂಗದ ಉತ್ತಮಿಕೆಯನ್ನು ಒಪ್ಪದಿರುವುದು. ಗೌಂಡರ್‌ಗಳ ಉತ್ತಮಿಕೆಯನ್ನು ಅಲ್ಲಗಳೆಯಲು ಈ ಪಂಗಡದವರು ತಮ್ಮ ಆಚರಣೆಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ಮಡಿವಂತಿಕೆಯನ್ನು ತಂದುಕೊಂಡಿದ್ದಾರೆ. [ಭಾರತದಾದ್ಯಂತ ಕುಶಲಕರ್ಮಿಗಳು (ವಿಶ್ವಕರ್ಮ ಬ್ರಾಹ್ಮಣರೆಂದು ಹೇಳಿಕೊಳ್ಳುವವರು) ತಾವು ಆಚಾರ ವಿಚಾರಗಳಲ್ಲಿ ಜಮೀನ್ದಾರಿ ಜಾತಿಯವರಿಗಿಂತ ಉತ್ತಮರೆಂದು ಹೇಳಿಕೊಳ್ಳುವುದನ್ನು ಇಲ್ಲಿ ಗಮನಿಸಬಹುದು).

ಇಲ್ಲಿ ಒಂದು ಮುಖ್ಯ ಪ್ರಶ್ನೆ ಏಳುತ್ತದೆ: ಮೇಲೆ ಹೇಳಿದಂತೆ ತೀರ ಕೆಳಗಿನ ಜಾತಿಯ ಜನರ ಒಲವು (ಈ ಎರಡು ಪಂಗಡಗಳ ನಡುವೆ) ಖಚಿತವಾಗಿಲ್ಲದಿದ್ದರೂ ಈ ಸ್ತರದ ಜನರೇ ಯಾಕೆ ‘ಬಲಗೈ’ ಮತ್ತು ‘ಎಡಗೈ’ ಭೇದದ ಹೆಸರಿನಲ್ಲಿ

ಗಿಂತ ಹೆಚ್ಚು ಬದ್ಧರಾಗಿದ್ದೇವೆಂದು ತೋರಿಸಿಕೊಳ್ಳಲು ಪ್ರಯತ್ನಿಸುವುದು ಮತ್ತು ಸಮಾಜದಲ್ಲಿ ತೀರ ಕೆಳಮಟ್ಟದಲ್ಲಿರುವವರು ತಮಗಿಂತಲೂ ಕೆಳಗೆ ಇನ್ನೂ ಒಂದು ಗುಂಪಿದೆ ಎಂದು ತೋರಿಸಿಕೊಳ್ಳಲು ಪ್ರಯತ್ನಿಸುವುದು.

[ಮೇಲಿನ ವಿಚಾರಗಳನ್ನೊಳಗೊಂಡ ಲೇಖನವನ್ನು ಪ್ರಕಟಿಸಿದ ಒಂದು ವರ್ಷದ ನಂತರ ಮೇಲಿನ ಪ್ರಮಾಣಗಳನ್ನೇ ಆಧಾರವಾಗಿಟ್ಟುಕೊಂಡು ಇನ್ನೊಂದು ರೀತಿಯಲ್ಲಿ. ಕಂಪ್ಯೂಟರ್‌ನ ಸಹಾಯದಿಂದ ನಡೆಸಿದ ವಿಶ್ಲೇಷಣೆಯಿಂದ ಮೇಲಿನ ಇತ್ಯರ್ಥಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಯಿತು. ಮುಖ್ಯವಾಗಿ ಈ ಎರಡು ಮಾದರಿಗಳನ್ನು ಅನುಸರಿಸುವುದಕ್ಕೆ ಒಂದು ಜಾತಿಯು ಜಾತಿಶ್ರೇಣಿಯ ಯಾವ ಸ್ಥಾನದಲ್ಲಿದೆ ಎಂಬುದು ಮುಖ್ಯವಲ್ಲ ಎಂದು ತಿಳಿದು ಬಂದಿತು. ಈಗ ಒಂದು ಜಾತಿಯ ಸ್ಥಾನವನ್ನು ಈ ಕಾರಣಕ್ಕಾಗಿ ಬೇರೆ ಎರಡು ದೃಷ್ಟಿಕೋನಗಳಿಂದ ನೋಡಬೇಕಾಗುತ್ತವೆ. ಆ ಎರಡು ಕೋನಗಳು ಹೀಗಿವೆ:

೧. ಅಧಿಕಾರ ಚಲಾಯಿಸುವವರು, ಇವರಿಗೆ ಎದುರಾಗಿ ವಿಧೇಯತೆಯನ್ನು ತೋರಿಸುವವರು, ತಮ್ಮ ವಿಶಿಷ್ಟತೆಯನ್ನು ಕಾಪಾಡಿಕೊಳ್ಳುವವರು ಅಥವಾ ಈ ಜಗ್ಗಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವವರು ಅಥವಾ ಈ ಜಗ್ಗಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅಪೇಕ್ಷಿಸದೇ ತಟಸ್ಥರಾಗಿರುವವರು.

೨. ಬರೀ ಆರ್ಥಿಕ ಕ್ಷೇತ್ರದಲ್ಲಿ ಪರಸ್ಪರಾವಲಂಬಿಗಳಾಗಿರುವವರು ಮತ್ತು ಇವರಿಗೆ ಎದುರಾಗಿ ವಿದ್ಯುಕ್ತ ಕ್ರಿಯೆಗಳಲ್ಲಿ ಪರಸ್ಪರಾವಲಂಬಿಗಳಾಗಿರುವವರು.

ಹೀಗೆ ಈ ವ್ಯವಸ್ಥೆ ಮೊದಲು ತಿಳಿದುದಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ಈ ರೀತಿಯ ವಿಶ್ಲೇಷಣೆ ಈ ಪ್ರದೇಶದ ಸಮಾಜವನ್ನು ಇತರ ಪ್ರದೇಶಗಳ ಸಮಾಜದೊಂದಿಗೆ ಹೋಲಿಸಲು ಸಹಾಯ ಮಾಡುತ್ತದೆ].

ಮೇಲೆ ಹೇಳಿರುವ ಮಾತುಗಳು ಕೊಯಮುತ್ತೂರು ಜಿಲ್ಲೆಗೆ ಮಾತ್ರ ಅನ್ವಯಿಸುತ್ತದೆ. ಈ ಪ್ರದೇಶ

ಗತ ಕಾಲದಿಂದ

ದಲ್ಲಿ ಬ್ರಾಹ್ಮಣರಿಗೂ ಮತ್ತು ಗೌಂಡರ್ ಜನಾಂಗಕ್ಕೂ ಜೀವನ ಕ್ರಮದಲ್ಲಿ ಬಹಳ ವ್ಯತ್ಯಾಸವಿದೆ ಎಂಬುದನ್ನು ಗಮನಿಸಬೇಕು. ಆದೇ ಬ್ರಾಹ್ಮಣರ ಸಂಖ್ಯೆ ಬೆಚ್ಚಾಗಿದ್ದ ಮತ್ತು ಅವರೇ ಹೆಚ್ಚಾಗಿ ಜಮೀನ್ದಾರರಾಗಿದ್ದ ತಂಜಾವೂರಿನಲ್ಲಿ ಮೇಲಿನ ಮಾತುಗಳು ಅಷ್ಟಾಗಿ ಅನ್ವಯಿಸುವುದಿಲ್ಲ. ತಂಜಾವೂರಿನಲ್ಲಿ ಬಹುಸಂಖ್ಯಾತರಾಗಿರುವ ವೆಲ್ಲಾಳರ (ಕೃಷಿಕ ಜನಾಂಗ) ಜೀವನ ಕ್ರಮ ಬ್ರಾಹ್ಮಣರ ಜೀವನ ಕ್ರಮದಿಂದ ಒಡೆದು ಕಾಣುವಷ್ಟು ವ್ಯತ್ಯಾಸವನ್ನು ತೋರಿಸುವುದಿಲ್ಲ. ಎಲ್ಲಿ ಬ್ರಾಹ್ಮಣರು ಜಮೀನ್ದಾರರಾಗಿರುತ್ತಾರೋ ಅಲ್ಲಿ ಅವರ ಸಾಮಾಜಿಕ ಸ್ಥಾನ ಇತರರಿಗಿಂತ ಉನ್ನತವಾಗಿದ್ದರೂ ಕೂಡ ಅವರ ಮಡಿವಂತಿಕೆ ಸಹಜವಾಗಿಯೇ ಸ್ವಲ್ಪ ಸಡಿಲವಾಗಿರುತ್ತದೆ. ಈ ಕಾರಣದಿಂದಾಗಿಯೇ ತಂಜಾವೂರಿನಲ್ಲಿ ‘ಬಲಗೈ’ ‘ಎಡಗೈ’ ಪಂಗಡಗಳ ಭೇದ ಭಾವನೆ ಕೊಯಮುತ್ತೂರಿನಲ್ಲಿರುವಷ್ಟು ಇಲ್ಲ. ಇದೇ ಕಾರಣದಿಂದಾಗಿ ಕೇರಳ ಪ್ರದೇಶದಲ್ಲೂ ಈ ಭೇದಭಾವನೆ ಉದ್ಭವಿಸಿಲ್ಲ ಎಂದು ಡಾ॥ ಬೆಕ್ ಊಹಿಸಿದ್ದರು. ಯಾಕೆಂದರೆ ಕೇರಳದಲ್ಲಿ - ನಂಬೂದಿರಿ ಬ್ರಾಹ್ಮಣರೇ ದೊಡ್ಡ ಜಮೀನ್ದಾರರೂ ಆಗಿದ್ದರು ಮತ್ತು ಅಲ್ಲಿನ ಮುಖ್ಯ ಅಬ್ರಾಹ್ಮಣ ಜಾತಿಯವರಾದ ನಾಯರ್ ಜನಾಂಗದೊಡನೆ ಅವರ ಸಂಬಂಧ ತೀರ ನಿಕಟವಾದುದಾಗಿತ್ತು.

೧೮ ಮತ್ತು ೧೯ನೆಯ ಶತಮಾನದಲ್ಲಿ, ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ‘ಬಲಗೈ’ ಮತ್ತು ‘ಎಡಗೈ’ ಪಂಗಡಗಳ ನಡುವೆ ಘೋರವಾದ ಹೊಡೆದಾಟಗಳು ನಡೆದುಹೋದವು. ಇದಕ್ಕೆ ಮುಖ್ಯ ಕಾರಣ ಬ್ರಿಟಿಷರು ಈ ಎರಡೂ ಪಂಗಡಗಳವರನ್ನು ಸಮಾನರೆಂದು ಕಂಡದ್ದು. ಕಳೆದ ಶತಮಾನದಿಂದೀಚೆಗೆ ಈ ಹೊಡೆದಾಟಗಳು ಕಡಿಮೆಯಾದುದಕ್ಕೆ ಡಾ॥ ಬೆಕ್ ಅವರ ವಿವರಣೆ ಹೀಗಿದೆ: ಭಾರತದಲ್ಲಿ ಬ್ರಿಟಿಷರು ಬರುವುದಕ್ಕೆ ಮೊದಲು ಕೃಷಿಭೂಮಿಯು ರಾಜನಿಗೆ ಸೇರಿದುದಾಗಿತ್ತು. ಆ ಭೂಮಿಯಲ್ಲಿ ಬೆಳೆಯುವ ಬೆಳೆಯನ್ನು ಮತ್ತು ಫಸಲಿನಲ್ಲಿ ಭಾಗವನ್ನು ಪಡೆಯುವ ವಂಶಪಾರಂಪರ್ಯವಾದ ಹಕ್ಕು ಮಾತ್ರ ಪ್ರಜೆಗಳಿಗೆ ಇತ್ತು. ಕೃಷಿ ಭೂಮಿ ಯಾರ ಖಾಸಗಿ ಆಸ್ತಿಯೂ ಆಗಿರಲಿಲ್ಲ. ಆದ್ದರಿಂದ ಇಂತಹ ಹಕ್ಕುಗಳಿಲ್ಲದಿದ್ದವರು ಯಾವುದಾದರೂ ಕರಕುಶಲ ಕಸುಬನ್ನು ಅವಲಂಬಿಸಿ ಹಣ ಸಂಪಾದಿಸುತ್ತಿದ್ದರು. ಈ ರೀತಿಯಾದ ಕಸುಬಿನಲ್ಲಿ ತೊಡಗಿದ ಕೆಲವರು ಬಹಳ ಹಣವನ್ನು ಹೊಂದಿ ಸಮಾಜದಲ್ಲಿ ಪ್ರತಿಷ್ಠಿತಸ್ಥಾನಗಳಿಸಿದರು.

(ಮುಂದಿನ ಪುಟಕ್ಕೆ)

ಅಸ್ಪೃಶ್ಯರೊಳಗಿನ 'ಎಡಗೈ' ಮತ್ತು 'ಬಲಗೈ' ಜಾತಿಗಳು

ಕೃಷಿ ಉತ್ಪನ್ನಗಳನ್ನೇ ಆಸ್ತಿಯಾಗಿ ಉಳ್ಳವರ ಎರಡು ಗುಂಪು ಸೃಷ್ಟಿಯಾಗಲು ಇದು ಕಾರಣವಾಯಿತು. ಆದರೆ ಬ್ರಿಟಿಷರು ಪ್ರಾರಂಭಿಸಿದ 'ರೈತವಾರಿ' ವ್ಯವಸ್ಥೆಯಿಂದಾಗಿ ಕೃಷಿಭೂಮಿಯನ್ನು ಯಾರು ಬೇಕಾದರೂ ಕೊಂಡು ಮಾರುವ ಹಕ್ಕನ್ನು ಪಡೆಯುವಂತಾಯಿತು. ಇದರಿಂದ ಹಣವಂತರಾದವರು ತಮ್ಮ ಆಸ್ತಿಯನ್ನು ಭೂಮಿ ಕಾಣಿಯ ರೂಪಕ್ಕೆ ಪರಿವರ್ತಿಸಲು ಸಹಾಯವಾಯಿತು. ಬ್ರಿಟಿಷರ ಕಾಲದಲ್ಲಿ ಜಾರಿಗೆ ಬಂದ ಹೊಸ ಕಾನೂನುಗಳಿಂದಾಗಿ ಮತ್ತು ಅವರು ಸ್ಥಾಪಿಸಿದ ಹೊಸ ಆಡಳಿತ ವ್ಯವಸ್ಥೆ ಹಾಗೂ ಹೊಸ ಸಾರಿಗೆ ಸಂಪರ್ಕಗಳಿಂದಾಗಿ ಬಹಳ ಬದಲಾವಣೆಗಳಾಗಿ ಜನರಿಗೆ ತಮ್ಮ ವಂಶಪಾರಂಪರ್ಯವಾದ ಕುಲಕಸುಬುಗಳನ್ನು ಬಿಟ್ಟು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗುವ ಅವಕಾಶ ದೊರೆಯಿತು. ಇದರಿಂದಾಗಿ 'ಎಡಗೈ' ಮತ್ತು 'ಬಲಗೈ' ಪಂಗಡಗಳ ವಾದವಿವಾದಗಳಲ್ಲಿ ಜನರ ಆಸ್ಥೆ ಕಡಿಮೆಯಾಯಿತು. ಆದರೆ ಈಗಲೂ ಈ ವಿಭಜನೆಯನ್ನು ಗುರುತಿಸಬಹುದಾದ ಕೆಲವು ಆಚರಣೆಗಳನ್ನು ಅಲ್ಲಿ ಇಲ್ಲಿ ಕಾಣಬಹುದಾಗಿದೆ.

ಡಾ॥ ಬೆಕ್ ಅವರ ವಿಚಾರಗಳಿಗೆ ಪುಷ್ಟಿ ಕೊಡಲು ಖ್ಯಾತ ಭಾರತೀಯ ಮಾನವ-ಸಮಾಜ ಶಾಸ್ತ್ರಜ್ಞ ಪ್ರೊ॥ ಎಂ. ಎನ್. ಶ್ರೀನಿವಾಸರು ೧೯೪೮ರ ಸುಮಾರಿನಲ್ಲಿ ಮೈಸೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ ನಡೆಸಿದ ಸಂಶೋಧನೆಯಿಂದ ತಿಳಿದುಬಂದ ವಿಚಾರಗಳನ್ನು (ಇಲ್ಲಿ ಚರ್ಚಿಸಲಾಗಿರುವ ವಿಚಾರಗಳಿಗೆ ಸಂಬಂಧಿಸಿದಂತೆ) ಗಮನಿಸಬಹುದು. (ಎಂ. ಎನ್. ಶ್ರೀನಿವಾಸ್ ; ೧೯೫೫ ; ಪುಟ ಸಂಖ್ಯೆ ೨೩ ಮತ್ತು ೨೪).

"ರಾಂಪುರದ ಕಮ್ಮಾರ ಅಥವಾ ಆಚಾರಿಗಳು ತಾವು ಬ್ರಾಹ್ಮಣರಿಂದ ಮಾತ್ರ ಬೇಯಿಸಿದ ಪದಾರ್ಥಗಳನ್ನು ಸ್ವೀಕರಿಸುತ್ತೇವೆಂದು ಹೇಳುತ್ತಾರೆ. ಕಮ್ಮಾರ ಜಾತಿಯ ಗಂಡಸರು, ಬೇಯಿಸಿದ ಪದಾರ್ಥಗಳನ್ನು ಲಿಂಗಾಯತರಿಂದಲೂ ಸ್ವೀಕರಿಸುತ್ತಾರಾದರೂ ಅವರ ಹೆಂಗಸರು ಈ ವಿಚಾರದಲ್ಲಿ ಭಿನ್ನರು. ಹೀಗಿದ್ದೂ ಕೂಡ ಹಿಂದೂ ಜನಾಂಗಕ್ಕೆ ಸೇರಿದ ಎಲ್ಲರೂ ಅಲ್ಲದಿದ್ದರೂ ಬಹಳಷ್ಟು ಜಾತಿಗಳವರು ಕಮ್ಮಾರರು ತಮಗಿಂತ ಕೀಳು ಜಾತಿಯವರು ಎಂದು ಹೇಳುತ್ತಾರೆ. ಇದಕ್ಕೆ ನಿದರ್ಶನವಾಗಿ ಇತರ ಜಾತಿಯ ಜನರು ಕಮ್ಮಾರರಿಂದ ಬೇಯಿಸಿದ ಪದಾರ್ಥಗಳನ್ನು ಮತ್ತು ನೀರನ್ನು ತೆಗೆದುಕೊಳ್ಳದಿರುವುದರ ಕಡೆಗೆ ಗಮನ ಸೆಳೆಯುತ್ತಾರೆ. ಅಸ್ಪೃಶ್ಯ ಜಾತಿಗೆ ಸೇರಿದವರಾದ ಹೊಲೆಯರು ಕೂಡ ಕಮ್ಮಾರರಿಂದ ಅನ್ನ ಮತ್ತು ನೀರನ್ನು ತೆಗೆದುಕೊಳ್ಳುವುದಿಲ್ಲ. ಕಮ್ಮಾರರ ಈ ವಿಚಿತ್ರ ಸ್ಥಿತಿಗೆ ಒಂದು ಕಾರಣವೆಂದರೆ ಅವರು 'ಎಡಗೈ' ಪಂಗಡಕ್ಕೆ ಸೇರಿರುವುದು ಮತ್ತು ಅಬ್ರಾಹ್ಮಣ ಜಾತಿಗಳಲ್ಲಿನ ಬಹಳಷ್ಟು ಜಾತಿಗಳವರು ಹೊಲೆಯರನ್ನು ಒಳಗೊಂಡಂತೆ 'ಬಲಗೈ' ಪಂಗಡಕ್ಕೆ ಸೇರಿರುವುದು. ಬ್ರಾಹ್ಮಣರು ಮತ್ತು ಪ್ರಾಯಶಃ ಲಿಂಗಾಯತರು ಈ ವಿಂಗಡನೆಯಿಂದ ಹೊರಗಿದ್ದಾರೆ. 'ಎಡಗೈ' ಪಂಗಡಕ್ಕೆ ಸೇರಿದ ಕಮ್ಮಾರರು ಮತ್ತು ಅಸ್ಪೃಶ್ಯರಾದ ಮಾದಿಗರ ಮೇಲೆ ಕೆಲವು ಸಾಮಾಜಿಕ ನಿಷೇಧಗಳನ್ನು ಹೇರಲಾಗಿತ್ತು. ಉದಾಹರಣೆಗೆ ಹಿಂದಿನ ಕಾಲದಲ್ಲಿ ಈ ಪ್ರದೇಶದಲ್ಲಿ ಕಾಳಿ ಮಂದಿರಗಳಿದ್ದ ಹಳ್ಳಿಗಳನ್ನುಳಿದ ಇನ್ನಿತರ ಹಳ್ಳಿಗಳಲ್ಲಿ ಕಮ್ಮಾರರ ಮದುವೆಗಳನ್ನು ಹಳ್ಳಿಯ ಒಳಗೆ ಮಾಡಗೊಡುತ್ತಿರಲಿಲ್ಲ. ಕಮ್ಮಾರರ ಮದುವೆಯ ಮೆರವಣಿಗೆ ಮೇಲು ಜಾತಿಯವರು ವಾಸಿಸುತ್ತಿದ್ದ ಪ್ರದೇಶಗಳನ್ನು ಹಾದು ಹೋಗುವಂತಿರಲಿಲ್ಲ. ಯಾವ ಕಮ್ಮಾರನೂ ಚಡಾವುಗಳನ್ನು ಧರಿಸಲಾಗುತ್ತಿರಲಿಲ್ಲ. ಕಮ್ಮಾರರ ಮದುವೆಯ ಮಂಟಪಗಳು ಬೇರೆಯವರ ಮದುವೆಯ ಮಂಟಪಗಳಿಗಿಂತ ಒಂದು ಕಂಬ ಕಮ್ಮಿ ಹೊಂದಿರಬೇಕಾಗುತ್ತಿತ್ತು. ಈಗಲೂ ಕೂಡ ಕಮ್ಮಾರರು 'ಬಲಗೈ' ಪಂಗಡದವರಿಗಿಂತ ಒಂದು ಬಣ್ಣ ಕಡಿಮೆ ಎಂದು ಹೇಳಲಾಗುತ್ತದೆ ಮತ್ತು ಇದಕ್ಕೆ ಕಾರಣ ಕೊಡಲು ಕೆಲವು ಪುರಾಣ ಕಥೆಗಳು ಇವೆ.

ಈ ಸಂಗ್ರಹಕ್ಕಾಗಿ ಬಳಸಿಕೊಳ್ಳಲಾದ ವಿಚಾರಗಳು ಕೆಳಕಂಡ ಗ್ರಂಥಗಳಿಂದ ಪಡೆದವುಗಳು :

1. BECK, BRENDA E. F. :
The Right and Left division of South Indian Society 1972 Reprinted as chapter 18 in RIGHT & LEFT Essays on Dual Symbolic Classification' Edited and With an introduction by Rodney Needham ; The University of Chicago Press 1973 : Chicago & London. Pages 391 to 426.

2. SRINIVAS M. N. :
The Social System of a Mysore Village : 1955 published in VILLAGE INDIA (Studies in the Little Cul-ture) Edited by Mekim Marriot TheUniversity of Chicago Press : Chicago & London; 7th impression 1967. Pages 23 to 24

3. HUTTON J. H. :
CASTE IN INDIA (O U P Bombay) 4th Edition 1963 3rd Impression 1973 Pages 67 to 70 and 166.

(ಕೃಪೆ : ರುಜುವಾತು)

ದಲಿತ ನೌಕರರ ನರಕ : ಮೈಸೂರು ಇ.ಎಸ್.ಐ. ಆಸ್ಪತ್ರೆ

ಮೈಸೂರಿನ ರಾಜ್ಯ ಕಾರ್ಮಿಕರ ವಿಮಾ ಆಸ್ಪತ್ರೆ ನಾಲ್ಕನೆಯ ದರ್ಜೆ ದಲಿತ ನೌಕರರ ಪಾಲಿಗೆ ನರಕವಾಗಿದೆ. ಆಸ್ಪತ್ರೆಯ 150ಕ್ಕೂ ಹೆಚ್ಚು ನೌಕರರ ನಡುವೆ ಈ 8ಜನ ದಲಿತ ನೌಕರರು ಪ್ರಾಣಿಗಳಿಗಿಂತ ಕೀಳಾಗಿ ಬದುಕ ಬೇಕಾಗಿದೆ. ಇವರು ಜಾತಿಯಲ್ಲಿ ಅಸ್ಪೃಶ್ಯರಾದ್ದರಿಂದ ಕಕ್ಕಸ್ಸು ತೊಳೆಯುವ ಮಿಸಲುಕೆಲಸದಾಳುಗಳಾಗಿದ್ದಾರೆ. ಇಲ್ಲಿನ ಆಡಳಿತಾಧಿಕಾರಿ ಎಸ್. ಎಂ. ಬಸವರಾಜರು ಉಗ್ರ ಜಾತಿವಾದಿ. ಮೇಲ್ಜಾತಿ ನೌಕರರ ಕೋಪಕ್ಕೆ ತುತ್ತಾದ ಪಿ. ಮಹಾದೇವಮ್ಮನೆಂಬ ನಾಲ್ಕನೆಯ ದರ್ಜೆ ದಲಿತ ನೌಕರಳನ್ನು ಜಾತಿವಾದಿ ಬಸವರಾಜರವರು ಸಸ್ಪೆಂಡ್ ಮಾಡಿರುತ್ತಾರೆ. ಅದೇ ಆಸ್ಪತ್ರೆಯ ನೌಕರರಾದ ನರ್ಸ್‌ಕಮಲಮ್ಮ ಜಾತಿಅಸೂಯೆಯಿಂದ ಜಗಳ ತೆಗೆದು ''ಹೊಲೆಮುಂಡೆ ಎಕ್ಕಡದಲ್ಲಿ ಹೊಡಿತೀನಿ" ಎಂದಿರುವಳು. ಅದಕ್ಕೆ ಮಹಾದೇವಮ್ಮನ ಪ್ರತ್ಯುತ್ತರ : ನನ್ನ ಕಾಲಲ್ಲೂ ಚಪ್ಪಲಿಗಳಿವೆ.' ಕಮಲಮ್ಮನಿಗೆ ಸಪೋರ್ಟಾಗಿ ಬಂದ ಮತ್ತೊಬ್ಬ ನೌಕರ ಹೆಚ್. ಎಸ್ ನಾಗರಾಜರಾವ್ "ಹೊಲತಿ ಕಳ್ಳಮುಂಡೆ" ಎಂದು ಬೈದಿರುತ್ತಾನೆ. ಈ ಸಂಗತಿಗಳನ್ನ ಆಡಳಿತಾಧಿಕಾರಿಯವರ ಗಮನಕ್ಕೆ ತಂದಾಗ : ಹೊಲತೀನ ಹೊಲತಿ ಅನ್ನದೆ ಬ್ರಾಹ್ಮಣರವಳು ಅಂತಾರಾ? ಹೆಚ್ಚು ತರಲೆ ಮಾಡಿದರೆ ಸಸ್ಪೆಂಡ್ ಮಾಡ್ತೀನಿ" ಎಂಬು ಆಡಿದಂತೆ ಮಾಡಿದ್ದಾನೆ.

ಈ ಕೇಸಿನ ಹಿನ್ನೆಲೆಯಲ್ಲಿ ನಾನು ಆಡಳಿತಾಧಿಕಾರಿಯವರನ್ನು 25-2-83 ರಂದು ಭೇಟಿ ಮಾಡಿದಾಗ ಅವರ ಜತೆ ಮಾತಾಡಿದ್ದು ಕೆಳಗಿದೆ :

ನಾನು : ನಮಸ್ಕಾರ ಸಾರ್.

ಅಧಿಕಾರಿ : ಯಾರು ನೀವು? ಏನಾಗಬೇಕು?

ನಾನು : ನಾವು ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು. ನೀವು ಮಹಾದೇವಮ್ಮರನ್ನು ಸಸ್ಪೆಂಡ್ ಮಾಡಿದ್ದೀರಂತೆ, ಅದರ ಬಗ್ಗೆ ಯಾಕೆ ಏನು ಎತ್ತ ತಿಳೀಬೇಕಿತ್ತು.

ಅಧಿಕಾರಿ : ಹೌದು ಸಸ್ಪೆಂಡ್ ಮಾಡಿದ್ದೀವಿ. ನಮ್ಮ ಹತ್ರ ಕೆ. ಸಿ. ಎಸ್. ಅರ್. ರೂಲ್ಸಿದೆ. ಅದರ ಪ್ರಕಾರನೆ ನಾವು ಕೆಲ್ಸಮಾಡೋದು. ಅದು

ಮುಳ್ಳೂರು ನಾಗರಾಜ

ಹರಿಜನರಿಗೋಂದು, ಬೇರೆ ಜಾತಿಯವರಿಗೊಂದು ಅಂತೇನಿಲ್ಲ ಗೊತ್ತೆ ?

ನಾನು : ನಾವು ಕೆ. ಸಿ. ಎಸ್. ಆರ್. ಬಗ್ಗೆ ಪ್ರಸ್ತಾಪಿಸಲಿಲ್ಲ? ನೀವು ಹರಿಜನ ನೌಕರರಿಗೆ ಕಿರುಕುಳ ಕೊಡ್ತಿದ್ದೀರಿ ಯಾಕೆ? ಮಹಾದೇವಮ್ಮನ್ನ ಸಸ್ಪೆಂಡ್ ಮಾಡಿದ್ದೀರಿ. ನಿಮ್ಮ ವಿರುದ್ಧ ನಾವ್ಯಾಕೆ ಧರಣಿ ನಡೆಸಬಾರದು?

ಅಧಿಕಾರಿ : ನಾನೇನು ಬೇಡ ಅಂದೆನಾ ? ಧಾರಾಳವಾಗಿ ಮಾಡಿ. ನಾನು ಹರಿಜನರಿಗೆ ಕಿರುಕುಳ ಕೊಡ್ತಿಲ್ಲ. ಬೇಕಾದ್ರೆ ಅವರನ್ನ ಕರೆಸಿ ಕೇಳಲಾ

ನಾನು : ಬೇಡ್ರಿ ನಿಮ್ಮ ಕಂಡ್ರೆ ಅವ್ರು ಹೆದ್ರತಾರೆ!

ಅಧಿಕಾರಿ : ಯಾಕೆ ಹೆದ್ರುತಾರೆ? ನಾನೇನು ಹುಲೀನ ಅವರನ್ನ ತಿಂದುಕೊಳ್ಳೀಕೆ?

ನಾನು : ಹುಲಿ ಅಲ್ರಿ. ಹುಲಿ ಥರ ಇದ್ದೀರಿ

ಆಡಳಿತಾಧಿಕಾರಿ : ನೋಡಿ ಮೊದಲೊಂದು ಸಲ. ನೀವು ದಲಿತ ಸಂಘರ್ಷ ಸಮಿತಿಯವರು ನನ್ನ ಮೇಲೆ ಆರೋಪ ಮಾಡಿದ್ರಿ. ಪೋಲಿಸ್ನವ್ರು ಸೆಲ್‌ನವರು ಎಲ್ಲಾ ಬಂದ್ರು. ಅವರ ರಿಪೋರ್ಟು ಏನಿದೆ ಅಂತಾ ನೋಡಿದ್ದೀರಾ?

ನಾನು : ಇಲ್ಲ ನೋಡಿಲ್ಲ.

ಆಡಳಿತಾಧಿಕಾರಿ : ನಮ್ದೇನು ತಪ್ಪಿಲ್ಲ ಅಂತಿದೆ. ಹಾಗಿದ್ರು ನೀವು ಬಂದ್ ನಮಗೆ ತೊಂದ್ರೆ ಕೊಡ್ತಿದ್ದೀರಿ

ನಾನು : ತೊಂದ್ರೆ ಕೊಡೋದು ನಮ್ಮ ಉದ್ದೇಶ ಅಲ್ರಿ ಈ ಬ್ಯೂರಾಕ್ರಸಿನೇ ಆ ಥರದ್ದು.

ಆಡಳಿತಾಧಿಕಾರಿ : ಬ್ಯೂರಾಕ್ರಸಿ ಅಂದ್ರೇನು ನನಗೆ ಗೊತ್ತಿಲ್ಲ

ನಾನು : ನಿಮಗ್ಗೊತ್ತಿಲ್ವ ನಿಜವಾಗ್ಲೂ ?

ಆಡಳಿತಾಧಿಕಾರಿ : ಇಲ್ಲ, ಗೊತ್ತಿಲ್ಲ ದಯವಿಟ್ಟು ಅದೇನು ಹೇಳಿ.

ನಾನು : ಮೇಲಿನಧಿಕಾರಿ ಕೆಳಗಿನವರನ್ನು ತುಳಿಯೋದು. ಕಡೆಗೆ ಇಬ್ರೂ ಸೇರ್ಕೊಂಡು ಬಡವರನ್ನ ತುಳಿಯೋದು. ಈಗ ನೀವು ಮಾಡ್ತಾ ಇದ್ದೀರಲ್ಲ ಅದು.—"ನೌಕರಶಾಹಿ"

ಆತ ಅರ್ಥವಾಗದೆ ಕಣ್ಣು ಕಣ್ಣು ಬಿಡ್ತಿದ್ದರು. ಆತ ತಮ್ಮ ನೌಕರರಿಗೆ ಹೀಗೆ ಹೇಳಿದರು ಇವರು ಹೇಳ್ತಿದ್ದಾರೆ ನಾವು ಇಲ್ಲಿ ಹರಿಜನ ನೌಕರರಿಗೆ Illtreat ಮಾಡ್ತಾ ಇದ್ದೀವಂತೆ....

ನಾನು : ಅಂತೆ ಅಲ್ರಿ ಮಾಡ್ತ ಇದ್ದೀರಿ.

ಆಡಳಿತಾಧಿಕಾರಿ : ನೋಡಿ ಪೋಲಿಸ್ ರಿಪೋರ್ಟಲ್ಲಿ ಅದೇನು ಇಲ್ಲ. ಸುಮ್ನೆ ತೊಂದ್ರೆಕೊಡ್ತೀರಿ

ನಾನು : ಅದರರ್ಥ ಪೋಲಿಸರು ನಿಮ್ಮ ಪರ ಇದ್ದಾರೆ. ಸತ್ಯದ ವಿರೋಧಿಗಳಾಗಿದ್ದಾರೆ.

ಅಧಿಕಾರಿ : ಏನ್ರಿ ನೀವೇಳೋದು ಒಬ್ಬ ಜಡ್ಜು ಬಂದು ತೀರ್ಮಾನ ಕೊಟ್ಟ ಮೇಲೆ ಅದು ಸುಳ್ಳೆ?

ನಾನು : ಓ ಬೇಕಾದಷ್ಟು ನಡೀತವೆ ಸುಳ್ಳು ಕೇಸುಗಳು ಸುಳ್ಳು ತೀರ್ಮಾನಗಳು !

ಆಡಳಿತಾಧಿಕಾರಿ : ನೋಡ್ರಿ ಕೆ,ಸಿ,ಎಸ್.ಆರ್ ರೂಲ್ಸನ್ನ ಮೀರೋಕಾಗೊಲ್ಲ ಹರಿಜನರು ಅಂತ ರಿಯಾಯ್ತಿ ತೋರಿಸೋಕಾಗಲ್ಲ.

ನಾನು : ಹೋಗ್ಲಿ ಕೆ. ಸಿ. ಎಸ್. ಆರ್. ನಲ್ಲಿ ಹರಿಜನರನ್ನ ಹೊಲೆಮಾಡಗ್ರು ಅಂತ ಬಯ್ಯಲು ರೂಲ್ಸಯ್ತೆ ? ಆತ ಗರಬಡಿದರಂತೆ ಕುಂತಿದ್ದರು ನಾನು ಹೊರಬಂದೆ.

(FORM IV (See Rule 8)

Statement of ownership and particulars of

'PANCHAMA'

1.	Place of Publication	Mysore
2.	Periodicity of Publication	Fortnightly
3.	Language in which it is Printed	Kannada
4.	Editor's, Printer's and Publisher's name	H. Govindaiah
	Nationality	Indian
	Address	2514, K. G. Koppalu, Mysore-14.
5.	Name and address of the individuals who own the news-paper and partners of share holders holding more than one percent of the total capital	H. Govindaiah Ramadeva Rakhe Indudhara Honnapur Shivaji Ganeshan Shivamallaiah 2514 K. G, Koppalu

I, H. Govindaiah , hereby declare that particulars given above are true to the best of my knowledge and belief.

MYSORE
20-3-83

Sd/ H. Govindaiah
Signature of Publishers.

ಪಾದಯಾತ್ರಿ ಚಂದ್ರಶೇಖರ್ : ದಲಿತರ ಕುಸಿದ ನಂಬಿಕೆ

- (ಮೊದಲ ಪುಟದಿಂದ)

ಹೊರಗಿನವರು

ಚರ್ಚೆ ದ.ಸಂ.ಸ. ದವರಿಗೆ ಮಾತ್ರ ಎಂದಿದ್ದರೂ ಬಹಳಷ್ಟು ಜನ ಹೊರಗಿನವರು ಬಂದಿದ್ದರು. ಪತ್ರಕರ್ತ ಖಾದ್ರಿಶಾಮಣ್ಣ ತಮ್ಮ ಭರ್ಜರಿ ದೇಹವನ್ನು ಕುರ್ಚಿಯೊಂದರ ಮೇಲೆ ಇಳಿಬಿಟ್ಟು ದಲಿತರ ಮನಮುಟ್ಟದ ಚಂದ್ರಶೇಖರ್ ಮಾತುಗಳಿಗೆ ತಲೆ ಹಾಕುತ್ತಿದ್ದರು. ಅನಂತಮೂರ್ತಿ ಅವರು ಮುಗುಳ್ನಗುತ್ತಿದ್ದರು. ನಮ್ಮನ್ನು ಅತಿಆಸೆಯಿಂದ ಚರ್ಚೆಗೆ ಕರೆದಿದ್ದ ಬಾಪು ಹೆದ್ದೂರ ಶೆಟ್ಟಿ ಒಂಥರ ಪೆಚ್ಚಾಗಿದ್ದರು. ನಮ್ಮ ಸಂಚಾಲಕ ಬಿ. ಕೃಷ್ಣಪ್ಪ ಅಂದು ಅತ್ಯಂತ ಮುಜುಗರದಿಂದೆಂಬಂತೆ ಚಂದ್ರಶೇಖರ್ ಪಕ್ಕ ಕೂರಲಾರದೆ ಕೂತಿದ್ದರು.

ಎಲ್ಲರ ಪರಿಚಯವಾದ ಮೇಲೆ ದ. ಸಂ. ಸ. ದೊಂದಿಗೆ ಚರ್ಚೆ ಏರ್ಪಡಿಸಿದ್ದಕ್ಕಾಗಿ ಹೆಮ್ಮೆಯಿಂದ ಬೀಗುತ್ತಿದ್ದ ಯುವಜನತಾದ ವೈ. ಎಸ್. ವಿ. ದತ್ತ ಸ್ವಾಗತಿಸಿ ಚರ್ಚೆಗೆ ಆಹ್ವಾನಿಸಿದರು. ಕೃಷ್ಣಪ್ಪ ಕೆಲವು ಮಾತಾಡುವಂತೆ ಚಂದ್ರಶೇಖರ್ ಅವರನ್ನು ಕೇಳಿದರು. ಚಂದ್ರಶೇಖರ್ ಭಾರತಯಾತ್ರೆ ಮಹತ್ವ,ಉದ್ದೇಶ ಇತ್ಯಾದಿಗಳನ್ನು ವಿವರಿಸ ತೊಡಗಿದರು. ನಡುವೆ ಎದ್ದುನಿಂತ ನಮ್ಮ ಹರಿಹರದ ಗೆಳೆಯ ಜಕ್ಕಪ್ಪನವರ್ 'ನಮ್ಮ ಸಮಸ್ಯೆಗಳ ಬಗ್ಗೆ ಮಾತಾಡಿ ಸ್ವಾಮಿ' ಅಂತ ಹೇಳಿದಾಗ ಚಂದ್ರಶೇಖರ್‌ಗೆ ಭಾಷಣ ಮಾಡುತ್ತಿರುವ ಅರಿವಾಗಿ ಥಟ್ಟನೆ ನಿಲ್ಲಿಸಿದರು.


ಆಶ್ಚರ್ಯ

ನಂತರ ಭೂ ಸಮಸ್ಯೆ ಬಗ್ಗೆ ಪ್ರಶ್ನೆ ಬಂತು. ಚಂದ್ರಶೇಖರ್ ಹೇಳಿದರು: 'ನನ್ನಲ್ಲಿ ಈ ಯಾವುದಕ್ಕೂ ಪರಿಹಾರ ಇಲ್ಲ. ಜನರ ಸಮಸ್ಯೆ ಅರಿಯಲೆಂದೇ ಈಗ ಪಾದಯಾತ್ರೆ ಕೈಗೊಂಡಿದ್ದೇನೆ' ದ.ಸಂ.ಸ. ಗೆಳೆಯರಿಗೆ ಆಶ್ಚರ್ಯ. ಚಂದ್ರಶೇಖರ್ ಆಡಿದ ಮಾತುಗಳಿಂದ ಅವರುಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಂತೆ ಕಂಡುಬಂದು ನಮ್ಮವರೆಲ್ಲ ಗೊಂದಲಗೊಂಡರು. ಹೊಸದಾಗಿ ಹೊಲೆಸಿದ್ದ ವಕೀಲರ ಡ್ರೆಸ್ ಹಾಕಿದ್ದ ನಮ್ಮ ಓ. ಶ್ರೀಧರನ್ ಚಂದ್ರಶೇಖರ್‌ಗೆ ಈ ಬಗ್ಗೆ ವಿವರಿಸಲು ನಡೆಸಿದ ಪ್ರಯತ್ನ ಸಫಲವಾಗಲಿಲ್ಲ. ಚಂದ್ರಶೇಖರ್‌ಗೆ ಇವೆಲ್ಲಾ ಸಣ್ಣ ಸಾಮಾನ್ಯ ವಿಷಯ ಅನ್ನಿಸಿರಬೇಕು. ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರಬೇಕೆಂಬ ಸಲಹೆ ನೀಡಿದರು.

ಎರಡನೆ ಸಮಸ್ಯೆ ಬಂದದ್ದು ಅಸ್ಪೃಶ್ಯತೆಯದ್ದು. ಅಸ್ಪೃಶ್ಯತೆ ಇಲ್ಲವೇ ಇಲ್ಲ ಎನ್ನುವ ಜಾತಿವಾದಿ ವಂಚಕರ ಸೋಗನ್ನೇ ಚಂದ್ರಶೇಖರ್ ಹಾಕಿದರು. ತಾವು ಹುಟ್ಟಿ ಬಂದ ಉತ್ತರಪ್ರದೇಶದಲ್ಲೂ ಇದು ಇಲ್ಲ ಎನ್ನುವಂತೆ ಮಾತಾಡಿದರು. ತಮ್ಮ ಗ್ರಾಮದ ಉದಾಹರಣೆ ಕೊಟ್ಟರು. ತಮ್ಮ ಮನೆ ಉದಾಹರಣೆ ಕೊಟ್ಟು ತಾವೇ ಪೆಚ್ಚಾದರು, ನಮಗೆಲ್ಲ ಆಶ್ಚರ್ಯ ಹಾಗೂ ಸಿಟ್ಟು ಬಂದಿತ್ತು. ಬಿ. ಕೃಷ್ಣಪ್ಪ ಅವರು ಗೇಲಿ ಮಾಡುವ ಧ್ವನಿಯಲ್ಲಿ ಉತ್ತರ ಪ್ರದೇಶದಲ್ಲಿ ದಲಿತರ ನರಮೇಧ ನಡೆಯುವ ಬಗ್ಗೆ ಪ್ರಸ್ತಾಪಿಸಿದಾಗ ಚಂದ್ರಶೇಖರ್ ಅದಕ್ಕೂ ಅಸ್ಪೃಶ್ಯತೆಗೂ ಸಂಬಂಧವೇ ಇಲ್ಲ ಎಂದರು. ಆರ್ಥಿಕ ಕಾರಣಕ್ಕಾಗಿ ಮಾತ್ರ ಅದು ನಡೆದದ್ದು ಎಂದು ವಾದಿಸಿದರು. ಆರ್ಥಿಕ ಕಾರಣಕ್ಕಾಗಿ ಮಾತ್ರ ನಡೆದ ನರಮೇಧವಾಗಿದ್ದರೆ ಬರೀ ದಲಿತರೇ ಯಾಕೆ ಅದಕ್ಕೆ ಬಲಿಯಾದರು ಎಂದು ಗೆಳೆಯರೊಬ್ಬರು ಸಿಟ್ಟಿನಿಂದ ಕೂಗಿ ಕೇಳಿದ್ದನ್ನು ಚಂದ್ರಶೇಖರ್ ಗಮನಿಸಲೇ ಇಲ್ಲ.

ಸವಾಲು

ಚರ್ಚೆ ಮುಗಿಸಲು ಚಂದ್ರಶೇಖರ್ ಕಾತುರರಾಗಿದ್ದರು. ಅಷ್ಟರಲ್ಲಿ ಅವರು ಕುಳಿತಿದ್ದ ಹಾಸಿನತ್ತ ಬಂದ ದಲಿತನೊಬ್ಬ ಅವರಿಗೊಂದು ಅರ್ಜಿ ನೀಡಿ



ಬೆಂಗಳೂರಿನ ಬಳಿಯೇ ಅಸ್ಪೃಶ್ಯತೆ ತೋರಿಸುವುದಾಗಿ ಸವಾಲುಹಾಕಿದ. ಚಂದ್ರಶೇಖರ್ ಥಟ್ಟನೆ 'ನಾನು ಅಲ್ಲೆಲ್ಲಾ ಬರಲಾಗುವುದಿಲ್ಲ. ತುಂಬಾ ದಣಿವಾಗುತ್ತಿದೆ' ಎಂದು ನಗುತ್ತಲೇ ಹೇಳಿದರು. ಆತ ಪಟ್ಟು ಬಿಡಲಿಲ್ಲ. ನೀವು ಹೋಗುವ ದಾರಿಯಲ್ಲೇ ಇದೆ ಎಂದಾಗ ಆಯ್ತು ನೋಡೋಣ ಎನ್ನುವ ಭರವಸೆ ಚಂದ್ರಶೇಖರರಿಂದ ಬಂತು.

ಅಷ್ಟರಲ್ಲಿ ಕೃಷ್ಣಪ್ಪ ಬೋಗಸ್ ಜಾತಿಪತ್ರದಿಂದ ದಲಿತರಿಗಾಗುತ್ತಿರುವ ಮೋಸದ ಪ್ರಸ್ತಾಪ ಮಾಡಿದರು. ಬೋಗಸ್ ಜಾತಿಪತ್ರದ ಬಗ್ಗೆ ತುಂಬಾ ನಿವೇದಿಸಿಕೊಂಡಿದ್ದ ನಮ್ಮ ಗಿರಿಜನ ಒಕ್ಕೂಟದ ಚಂದ್ರಶೇಖರ್ ಸಿ. ಆರ್. ಇ. ಸೆಲ್ ತನಿಖೆ, ರಾಜ್ಯ ಸರ್ಕಾರ ಅದನ್ನು ಮುಚ್ಚಿಹಾಕಲು ನಡೆಸುತ್ತಿರುವ ಯತ್ನ ಎಲ್ಲವನ್ನೂ ಬಡಬಡನೆಹೇಳಿ you should take serious action ಎಂದು ಆಗ್ರಹ ಪಡಿಸಿದರು. ಚಂದ್ರಶೇಖರ್‌ಗೆ ಇದೂ ಕೂಡ ಅಂಥ ದೊಡ್ಡ ಸಮಸ್ಯೆ ಅನ್ನಿಸಲಿಲ್ಲ. 'ಸುಲಭವಾಗಿ ಜಾತಿ ಪತ್ರ ಸಿಗುವಂತೆ ಮಾಡಬೇಕೆಂದು ನೀವೇ ಹೇಳುತ್ತೀರಿ ಮತ್ತೆ ಅದರ ದುರುಪಯೋಗ ಕೂಡ ಆಗುತ್ತೆ ಅಂತೀರಿ ನಾವೇನುಮಾಡುವುದು ಹೇಳಿ' ಎಂದು ನಮ್ಮನ್ನೇ ಪ್ರಶ್ನಿಸಿದರು.

ನಿರಾಶೆ

ಮೀಸಲಾತಿ ಪ್ರಶ್ನೆ ಬಂದಾಗ ಚರ್ಚೆ ಸಾಧ್ಯವೇ ಆಗದಂತ ಸ್ಥಿತಿಗೆ ಬಂದಿದ್ದೆವು. ಕೆಲವು ಜನತಾ ಮುಖಂಡರು ಮೀಸಲಾತಿ ವಿರುದ್ಧ ಮಾತನಾಡಿದರು. ಜನತಾ ಪಕ್ಷ ಅಧಿಕಾರಕ್ಕೆ ಬಂದದ್ದೇ ಅದು ಮೇಲ್ಜಾತಿಯವರ ಸರ್ಕಾರ ಅನ್ನುವ ತಿಳುವಳಿಕೆ ಇರುವುದು-ಈ ಯಾವುದರ ಬಗ್ಗೆ ಕೂಡ ಚಂದ್ರಶೇಖರ್ ಸರಿಯಾಗಿ ಮಾತಾಡಲಿಲ್ಲ, ದಲಿತರ ಸಮಸ್ಯೆಗಳನ್ನು ಅರಿಯುವ ಪ್ರಯತ್ನ ನಡೆಸುವ ಸೂಚನೆ ಕೂಡ ಕಂಡು ಬರಲಿಲ್ಲ. ರಾಷ್ಟ್ರಮಟ್ಟದ ಪಕ್ಷವೊಂದರ ಅಧ್ಯಕ್ಷರಾಗಿ ದೇಶವನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳ ಬಗ್ಗೆ ಕನಿಷ್ಟ ಅಭಿಪ್ರಾಯ, ಅವುಗಳ ಪರಿಹಾರಕ್ಕೆ ಸೂಚನೆ ನೀಡಲಾಗದ ಚಂದ್ರಶೇಖರ್ ಬಗ್ಗೆ ನಮಗೆ ನಿರಾಶೆ ಆಯಿತು.

ಅನುಕಂಪ

ಯಾವುದೇ ಸಮಸ್ಯೆಗೆ ಪರಿಹಾರ ನನ್ನಲ್ಲಿಲ್ಲ. ನಾನು ಏನೂ ಮಾಡಲಾರೆ. ಎಲ್ಲದಕ್ಕೂ ನಿಮ್ಮನ್ನೇ ಅವಲಂಬಿಸಿದ್ದೇನೆ ಮುಂತಾದ ಬೋಳೆ ಮಾತಗಳನ್ನೇ ಆಡಿ ಬುದ್ಧಿ ಜೀವಿಗಳನ್ನು ರಂಜಿಸುವಂತೆ ನಮ್ಮನ್ನು ರಂಜಿಸಲು ಚಂದ್ರಶೇಖರ್ ಪ್ರಯತ್ನಿಸಿದ್ದು ಅವರ ಬಗ್ಗೆ ಅನುಕಂಪ ಮೂಡುವಂತೆ ಮಾಡಿತು. ನಮ್ಮೆಲ್ಲರ ತಲೆಗಳಲ್ಲಿ ಚಂದ್ರಶೇಖರ್ ಎಂದರೆ ಕಾಣುತ್ತಿದ್ದ ಕ್ರಾಂತಿಕಾರಿಯಚಿತ್ರ ಕ್ರಮೇಣ ಮಂದವಾದ ಮಬ್ಬಿನಲ್ಲಿ ಕಾಣೆಯಾಗುತ್ತಿರುವ ಅನುಭವ ಆಯಿತು. ಯಾವುದೇ ಹಂತದಲ್ಲಿ ನಮ್ಮ ಆಶಯಗಳನ್ನೆಲ್ಲ ಸರಿ ಎಂದು ಒಪ್ಪುವ ಚಂದ್ರಶೇಖರ್ ಒಟಾಗಿ ಕೂಡ ಕಂಡು ಬಂದರು.

ಎಚ್ಚರಿಕೆ

ಸಂವಾದ–ಚರ್ಚೆ ಯಾವುದೂ ಸರಿಯಾಗಿ ಆಗದೆ ನಮ್ಮ ನಿರೀಕ್ಷೆಗೆ ಮೊದಲೇ ಮುಗಿದ ಈ ಕಾರ್ಯಕ್ರಮಕ್ಕೆ ರಾಜ್ಯದ ನಾನಾ ಕಡೆಗಳಿಂದ ಬಂದಿದ್ದ ದ. ಸಂ.ಸ. ಮುಖಂಡರುಗಳಂತೂ ಪೂರ್ಣ ನಿರಾಶೆಗೊಳಗಾಗಿದ್ದರು. ಚಂದ್ರಶೇಖರ್ ಏಳುವ ಮುಂಚೆ ಕೃಷ್ಣಪ್ಪ ದಲಿತ ವಿರೋಧಿ ಧೋರಣೆಯತ್ತ ಜನತಾ ಪಕ್ಷ ಹೆಜ್ಜೆ ಇಡುವ ಸೂಚನೆ ಕಂಡುಬರುತ್ತಿದೆ. ಆದ್ದರಿಂದ ಅದರ ವಿರುದ್ಧ ಕೂಡ ಹೋರಾಟ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಗ್ರಾಮೀಣ ಬದುಕನ್ನು ಅರ್ಥವೇ ಮಾಡಿಕೊಳ್ಳದ ಚಂದ್ರಶೇಖರ್ ಮಾತ್ರ ಎಲ್ಲರ ಮನಸ್ಸಿನಲ್ಲಿ ಅಸಹನೀಯ ಪ್ರಶ್ನೆಯಾಗಿ ಮಾತ್ರ ಉಳಿದರು.

KRNN 106 PANCHAMA FortNightly 20th March 1983 Reg,NO 256/176

ರತ್ನಪುರಿ ಬಿಡುಗಡೆ : ಪೋಲೀಸ್ ಕುತಂತ್ರಕ್ಕೆ ಹೊಡೆತ

ವರ್ಷದ ಹಿಂದೆ ರತ್ನಪುರಿಯ ಹರಿಜನ ಕಾಲೋನಿಯು ಸವರ್ಣೀಯರ ದಾಳಿಗೆ ಸಿಕ್ಕಿ, ಆ ಸಂದರ್ಭದಲ್ಲಿ ಸವರ್ಣೀಯನೊಬ್ಬ ಬಲಿಯಾದ ಕಾರಣಕ್ಕಾಗಿ ನಿಜ ಮನಗಾಣದ ಪೋಲಿಸರು ಕುತಂತ್ರ ಮಾಡಿ ಹರಿಜನರ ಮೇಲೆ ಕೊಲೆ ಮೊಕದ್ದಮೆಯನ್ನು ಹೂಡಿದ್ದ ಮೈಸೂರುಜಿಲ್ಲಾ ನ್ಯಾಯದೀಶರು ತಳ್ಳಿಹಾಕಿದರು ಮುಗ್ಧರನ್ನು ತಂದು ಅಪರಾಧಿಗಳನ್ನಾಗಿಸಿದ್ದಕ್ಕೆ. ಪೋಲೀಸ್ ಅಧಿಕಾರಿ ನಾಣಯ್ಯ ಎಂಬಾತ ಬೆವರಿಳಿಸಿಕೊಂಡನು. ವರ್ಷಾನು ಕಾಲ ಜೈಲಿನಲ್ಲಿದ್ದ ಶ್ರೀ ಜ್ಞಾನ ಪ್ರಕಾಶ ಮತ್ತು ರಾಮಸ್ವಾಮಿ ನಾಯ್ಕರ್‌ರು ಬಿಡುಗಡೆಯಾದರು. ನಮ್ಮ ದಲಿತ ಸಂಘರ್ಷ ಸಮಿತಿ ವಿಭಾಗ ಸಂಚಾಲಕ ಶ್ರೀ ಹರಿಹರಾನಂದ ಸ್ವಾಮಿಯವರನ್ನು ಕೂಡ ಈ ಮೊಕದ್ದಮೆಯಲ್ಲಿ ಪೋಲೀಸರು ಸಿಕ್ಕಿಸಿದ್ದರು. ಅಪರಾಧಿಗಳ ಪರವಾಗಿ ಖ್ಯಾತ ವಕೀಲರುಗಳಾದ ಶ್ರೀ ದ್ವಾರಕನಾಥ್. ಶ್ರೀ ವಿ. ಹೆಚ್. ಗೌಡ ವಾದಿಸಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೆ ರಾಮಸ್ವಾಮಿನಾಯ್ಕರ್ ನೋಡಲು ಸಿಗಲಿಲ್ಲ. ಅವರ ಬಗ್ಗೆ ವಿಚಾರಿಸಲಾಗಿ ನಾಯ್ಕರ್‌ರು ಜೈಲಿಗೆ ಹೋಗುವ ಮುನ್ನ ಹೇಗಿದ್ದರೊ ಹಾಗೆಯೇ ಇರುವರೆಂತಲೂ, ಆದರೆ ಜೈಲಲ್ಲಿ ಗಿರ್ಜಾಮಿ ಸೆಬಿಟ್ಟಿರುವರೆಂತಲೂ ತಿಳಿದು ಬಂತು. ಜ್ಞಾನ ಪ್ರಕಾಶ್‌ರನ್ನು ಕಂಡಾಗ ಅವರು ಕುಗ್ಗಿದ್ದರು. ವರ್ಷಾನು ಕಾಲ ಜೈಲ ಬದುಕು ಕಂಡು ಉಂಡು ಅವರದೇಹದ ತೂಕ ಇಳಿದಿದ್ದರೂ ಅವರ ಮನಸ್ಸು ಹೃದಯ ಭಾರಗೊಂಡತಿತ್ತು. ಜೈಲಲ್ಲಿ ತಮಗೆ ಸ್ವಾತಂತ್ರ ಎಂದರೆ ಏನು ಎಂಬುದು ತಿಳಿಯಿತೆಂದರು. ತಮಗೆ ಜೈಲುಣ್ಣಿಸಿದ ರತ್ನಪುರಿ ಬೆಂಕಿ ಘಟನೆಯನ್ನು ನೆನಸಿಕೊಂಡರು. ತಾವು ಹುಟ್ಟುವುದಕ್ಕೆ ಮೊದಲು ಬ್ಯಾಡರ ಹಳ್ಳಿಯಲ್ಲಿದ್ದ ತಮ್ಮ ತಾತ ಮುತ್ತಾತರನ್ನು ಸವರ್ಣೀಯರು ಬೆಂಕಿ ಹಚ್ಚಿ ಊರನ್ನೇ ಬಿಡಿಸಿದ್ದನ್ನು ನೆನೆಸಿಕೊಂಡರು. ಇನ್ನೊಂದು ಕಡೆ ನೆಲೆಗೊಂಡಾಗಲೂ ತಾವುಕೂಸಾಗಿದ್ದಾಗ ಅಲ್ಲಿಂದಲೂ ತಮ್ಮ ತಂದೆತಾಯಿಗಳನ್ನು ಸವರ್ಣೀಯರು ಬೆಂಕಿ ಹಚ್ಚಿ ಜಾಗ ಬಿಡಿಸಿದ್ದನ್ನು ನೆನಪಿಸಿಕೊಂಡರು. ಸವರ್ಣೀಯರ ಬೆಂಕಿ ಸಹವಾಸವೇ ಬೇಡ ಎಂದುಕೊಂಡು ಕಾಡಿಗೆ ಬಂದು ರತ್ನಪುರಿ ಎಂಬ ಊರನ್ನ ಕಟ್ಟಿದ ಮೇಲೂ, ಆ ಮೇ ಲೆ ಬಂದು ಸೇರಿಕೊಂಡ ಸವರ್ಣೀಯರು ಕಳೆದ ವರ್ಷ ಹರಿಜನಕೇರಿಗೆ ಬೆಂಕಿ ಹಾಕಿ ಸುಡಲು ಬಂದುದು ಜ್ಞಾನ ಪ್ರಕಾಶರ ಕಣ್ಣಿಗೆ ಕಟ್ಟಿದಂತಿತ್ತು. ಪೋಲೀಸ್ ಮೇಲಾಧಿಕಾರಿಯು ಈ ಬೆಂಕಿ ಕೇಸನ್ನು ಮುಚ್ಚಿಹಾಕಿಬಿಟ್ಟಿದ್ದರು, ಆದರೆ ಜ್ಞಾನ ಪ್ರಕಾಶರು ಮಾತಾಡುತ್ತಿದ್ದಾಗ ಆ ಬೆಂಕಿಯ ಝಳ ಅವರ ಕಣ್ಣುಗಳ ಒಳಗೆ ಉರಿಯುತ್ತಿತು. ಜ್ಞಾನ ಭಾರತ ಮಾತೆಯ ಜಾತೀಯ ಗುಹ್ಯ ರೋಗಕ್ಕೆ ನೊಂದು ಬೆಂದು ಸುಸ್ತಾಗಿದ್ದರು.

—ಬಾಂಬಿ

ದಲಿತರಿಂದ ಗುರುವಾಯೂರು ದೇವಸ್ಥಾನ ಪ್ರವೇಶ

ಕೇರಳದ ಹರಿಜನ ಫೆಡರೇಷನ್ನಿನ ನೂರ ಒಂದು ದಲಿತರು ಕಾವಿಯನ್ನೂ ತೊಟ್ಟು ಗುರುವಾಯೂರಿನ ದೇವಸ್ಥಾನವನ್ನು ಪ್ರವೇಶಿಸಿದರಲ್ಲದೆ, ಈ ದೇವಸ್ಥಾನದಲ್ಲಿ ದೇವರಿಗೆ ನೈವೇದ್ಯವನ್ನು ಕೊಡುವುದಕ್ಕೆ ಮೊದಲು ಬ್ರಾಹ್ಮಣ ಜನಾಂಗ ಊತುಪುರಾದಲ್ಲಿ (ಊಟದ ಮನೆ) ಸ್ವೀಕರಿಸುತ್ತಿದ್ದ ಪ್ರಸಾದ ಪಂಕ್ತಿಯಲ್ಲೂ ಭಾಗವಹಿಸಿ–ತಲ ತಲಾಂತರಗಳಿಂದ ನಡೆದುಕೊಂಡು ಬಂದಿದ್ದ ಸಂಪ್ರದಾಯವನ್ನು ಫೆಬ್ರುವರಿ 13, 1983 ರಂದು ಮುರಿದಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಶ್ರೀ ಓ. ಶ್ರೀಧರನ್ ಮತ್ತು ಶ್ರೀ ಓ ರಾಜಣ್ಣ ನವರನ್ನೊಳಗೊಂಡ ವಿಶೇಷ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಾವಿರಾರು ವರ್ಷಗಳಿಂದ ಬಂದ ಸಂಪ್ರದಾಯವನ್ನು ಮುರಿಯಲು ಹೊರಟ ಈ ಮಂದಿ ಫೆಬ್ರುವರಿ 1, 1983 ರಂದು ಟ್ರಿವೇಂಡ್ರಂನ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದಿಂದ ಪಾದಯಾತ್ರೆಯಲ್ಲಿ ಹೊರಟು ಫೆಬ್ರುವರಿ 13 ರಂದು ಬೆಳಗ್ಗೆ 9ಗಂಟೆಗೆ ಗುರುವಾಯೂರು ದೇವಸ್ಥಾನವನ್ನು ತಲುಪಿದರು. ಹೀಗೆ ಸುಮಾರು 375 ಕಿ.ಮೀ. ಗಳಷ್ಟುದೂರ ಪಾದಯಾತ್ರೆಯಲ್ಲಿ ಬರುವ ಸಮಯದಲ್ಲಿ, ದಾರಿಯಲ್ಲಿ ಸಿಕ್ಕಿದ ಹಲವಾರು ಪ್ರಮುಖ ದೇವಸ್ಥಾನಗಳಿಗೆ ಭೇಟಿಕೊಟ್ಟಿದ್ದರು.

ವರ್ಣ ಸಿದ್ಧಾಂತದಂತೆ ಉಳಿದ ಮೂರು ವರ್ಣಗಳಿಗಿಂತ ಮೇಲೆ ಇರುವ ಬ್ರಾಹ್ಮಣರು ಸಾಂಪ್ರದಾಯಿಕವಾಗಿ ಊತುಪುರಾದಿಂದ ನೀಡಲಾಗುತ್ತಿದ್ದ ಪ್ರಸಾದವನ್ನು, ಎಲ್ಲಾ ವರ್ಣದವರಿಗಿಂತ ಮೊದಲು ಸ್ವೀಕರಿಸುತ್ತಿದ್ದರು. ಈ ಪ್ರಸಾದದ ಸಂದರ್ಭದಲ್ಲಿ ಯಾವ ಜಾತಿಯವನೂ ಜೊತೆಯಲ್ಲಿ ಸೇರುವಂತಿರಲಿಲ್ಲ ಅಷ್ಟೇ ಅಲ್ಲದೆ, ಪ್ರಮುಖ ದೇವರಾದ ದೇವಾಧಿದೇವ ಕೃಷ್ಣನಿಗೆ ನೈವೇದ್ಯವನ್ನು ಅರ್ಪಿಸುವುದಕ್ಕೆ ಮೊದಲೇ ಇವರಿಗೆ ಈ ಸಂದರ್ಭದಲ್ಲಿ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿತ್ತು. ಅಂದರೆ ದೇವರಿಗಿಂತಲೂ ವಿಶೇಷ ಸಂದರ್ಭದಲ್ಲಿ ಎಲ್ಲಾ ಜಾತಿಯವರೂ ಒಟ್ಟಾಗಿ ಸೇರುವ ಅವಕಾಶಕ್ಕಾಗಿ **ಕೇರಳದ ಹರಿಜನ ಫೆಡರೇಷನ್** ಹಲವುಸಾರಿ ದೇವಸ್ಥಾನಗಳಿಗೆ ಸಂಬಂಧಪಟ್ಟ ವಿಶೇಷ ಬೋರ್ಡಿಗೆ ಮನವಿಸಲ್ಲಿಸಿದ್ದರೂ ಯಾವ ಅನುಕೂಲವೂ ಆಗಿರಲಿಲ್ಲ. ಯಾಕೆಂದರೆ ಗುರುವಾಯೂರು ದೇವಸ್ಥಾನಕ್ಕೆ ಸಂಬಂಧಪಟ್ಟ ಕಾನೂನಿನಲ್ಲಿ ಬ್ರಾಹ್ಮಣ ಜನಾಂಗ ಪ್ರತ್ಯೇಕವಾಗಿ ಪ್ರಸಾದವನ್ನು ಸ್ವೀಕರಿಸುವುದಕ್ಕೆ ಅವಕಾಶವನ್ನು ಮಾಡಿಕೊಡಲಾಗಿತ್ತು. ಆದರಿಂದ ಈ ಕಾನೂನು ಬದಲಾಗುವವರೆಗೆ ಯಾರೂ ಏನು ಮಾಡುವ ಹಾಗಿರಲಿಲ್ಲ.

ಟ್ರಿವೇಂಡ್ರಂನಿಂದ ಬರುವ ಜಾತಾವನ್ನು ಹಲವಾರು ಧಾರ್ಮಿಕ ಸಂಘ ಸಂಸ್ಥೆಗಳು ಸಂತೋಷದಿಂದ ಸ್ವಾಗತಿಸಿದುವು. ದೇವಸ್ಥಾನದ ಸುತ್ತಲೂ ಬಿಗಿಯಾದ ಪೋಲೀಸು ಬಂದೋಬಸ್ತ್ ಇದ್ದು, ಜಾತಾದಲ್ಲಿ ಬಂದ ಕಾರ್ಯಕರ್ತರ ಕೆಲಸ ಸುಲಭವಾಗುವಂತೆ ಮಾಡಿದರು. ಹೀಗೆಂದಾಕ್ಷಣ ಇನ್ನು ಮುಂದೆ ಯಾವ ರೀತಿಯ ಜಾತೀಯತೆಯೂ ಉಳಿಯುವುದಿಲ್ಲ ಅಥವಾ ಈ ರೀತಿಯ ಸಹ ಪಂಕ್ತಿಗೆ ಅಲ್ಲಿನ ಪುರೋಹಿತರು ಸುಲಭವಾಗಿ ಒಪ್ಪಿಕೊಂಡಿದ್ದಾರೆ ಎಂಬುದೂ ಅಲ್ಲ. ಕ್ರಿಶ್ಚಿಯನ್ನರ, ಮುಸಲ್ಮಾನರ ಜನಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಕೇರಳ ರಾಜ್ಯದಲ್ಲಿ ದಲಿತರು ಜನಸಂಖ್ಯೆಯ ದೃಷ್ಟಿಯಿಂದ ಹಿಂದೂ ಸವರ್ಣೀಯರ ಸಮಾಸಮಾ ಇದ್ದಾರೆ. ಹೀಗಿರುವುದರಿಂದ ದಲಿತ ಜನಾಂಗದವರನ್ನು ಸವರ್ಣೀಯ ಹಿಂದೂಗಳು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ಏನೆಲ್ಲಾ ಆಗಿಯೂ ಕೊನೆಗೂ ಸಹಪಂಕ್ತಿಯಲ್ಲಿ ಕೂತು ಉಣ್ಣಲು ಒಪ್ಪಿಕೊಂಡ ಪುರೋಹಿತಶಾಹಿ ಮನೋಧರ್ಮದ ಹಿಂದೂ ಮನಸ್ಸು ಇನ್ನೂ ಪರಿವರ್ತನೆ ಹೊಂದಿ ಮನುಷ್ಯತ್ವಕ್ಕೆ ಬೆಲೆ ಕೊಡುವಂತಾಗಲೆಂದು ಆಶಿಸೋಣ.

—ಓ. ರಾಜಣ್ಣ

ಸಂಪಾದಕ ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರಿ 25/4, ಕೆ. ಜಿ. ಕೊಪ್ಪಲು, ಮೈಸೂರು–14

ನಾಡಲ್ಲಿ ನವೋದಯಕ್ಕೆ ನಾಂದಿ

ಹೊಸ ಆಡಳಿತದ ರವಿ ಮೂಡಲು
ಇನ್ನಿಲ್ಲ ಎಲ್ಲೂ ಕತ್ತಲು
ಹೊಸ ಬಾಳಿಗೆ ತೆರೆಯಿತು ಬಾಗಿಲು
ಎಲ್ಲೆಲ್ಲೂ ಸಂತಸದ ಹೊನಲು

ಆಡಳಿತದಲ್ಲಿ ಎಲ್ಲ ಹಂತಗಳಲ್ಲೂ ಫೆಬ್ರವರಿ 15 ರಿಂದ ಕನ್ನಡ ಭಾಷೆ ಬಳಸಲು ಕಟ್ಟುನಿಟ್ಟಿನ ಆಜ್ಞೆ. ಕನ್ನಡ ಮಾಧ್ಯಮ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹ. ಜೊತೆಗೆ ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣೆಗೂ ಗಮನ.

- ❋ ಆಹಾರ ಧಾನ್ಯಗಳ ಹಾಗೂ ಅವಶ್ಯಕ ವಸ್ತುಗಳ ಬೆಲೆಗಳು ಈಗ ನಿಯಂತ್ರಿತ. ರಾಜ್ಯದ ಹೊರಗೆ ಆಹಾರ ಧಾನ್ಯಗಳ ಸಾಗಾಣಿಕೆಗೆ ತಡೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿಯ ಬೆಲೆ ಇಳಿತ. ಇದರಿಂದ ಜನ ಸಾಮಾನ್ಯರಿಗೂ ಹಿತ.
- ❋ ಹೊಸ ಸರ್ಕಾರ, ಹೊಸ ನಿರ್ಧಾರ, ಸ್ವಚ್ಛ ಆಡಳಿತ ಇದಕ್ಕಾಗಿ ಲೋಕ ಆಯುಕ್ತ.
- ❋ ಆಡಳಿತ ವಿಕೇಂದ್ರೀಕರಣ, ಜನರಿಗೆ ಆಡಳಿತದಲ್ಲಿ ಸಮಪಾಲು. ಅದಕ್ಕಾಗಿ ಪುರಸಭೆಗಳು, ಗ್ರಾಮ ಪಂಚಾಯಿತಿಗಳು, ಸಹಕಾರಿ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ಸರ್ಕಾರದ ಆದೇಶ. ಮಹಿಳೆಯರಿಗೆ ಹೆಚ್ಚು ಪ್ರಾತಿನಿಧ್ಯ, ಅವಕಾಶ.
- ❋ ನವಯುವಕರು ತಮ್ಮ ಪ್ರತಿನಿಧಿಗಳನ್ನು ನವಚೈತನ್ಯದೊಡನೆ ಆಯ್ಕೆ ಮಾಡಲು ಮತದಾರರ ವಯೋಮಿತಿ 20 ರಿಂದ 18 ಕ್ಕೆ ಇಳಿತ.
- ❋ ರೈತ ಸಮುದಾಯದ ಬೇಡಿಕೆ ಸಮಸ್ಯೆಗಳ ಸುಧಾರಣೆ, ಇದಕ್ಕಾಗಿ ಪ್ರತಿನಿಧಿಗಳೊಡನೆ ನೇರ ವಿಚಾರಣೆ, ಸಾಲ ವಸೂಲಿಗೆ ತಾತ್ಕಾಲಿಕ ತಡೆ. ರೈತರ ವಿರುದ್ಧ ಚಳುವಳಿಯ ಕಾಲದಲ್ಲಿ ಹೂಡಿದ್ದ ಮೊಕದ್ದಮೆಗಳಿಂದ ರೈತರಿಗೆ ಬಿಡುಗಡೆ.
- ❋ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಕಾರ್ಮಿಕ ನಾಯಕರೊಡನೆ ನೇರ ವಿಚಾರಣೆ. ವಿಶ್ವ ಕಾರ್ಮಿಕರ ದಿನದಂದು ರಜಾ ಘೋಷಣೆ.
- ❋ ಪಕ್ಷಾಂತರ ನಿವಾರಣೆಗೆ ತೀವ್ರ ಕ್ರಮ. ಜನಾಭಿಪ್ರಾಯಕ್ಕೆ ಮನ್ನಣೆ. ಪಕ್ಷಾಂತರ ತಡೆಗೆ ಮಸೂದೆಯ ಮಂಡನೆ ಹಿಂದುಳಿದ ಜನಗಳ ಮತ್ತು ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಆಯೋಗದ ರಚನೆ, ಹೊಸ ಸರ್ಕಾರದ ಇನ್ನೊಂದು ಸಾಧನೆ.

ದುರ್ಬಲ ವರ್ಗದ ಅಭಿವೃದ್ಧಿ, ಬಡತನ ನಿರ್ಮೂಲನೆ, ನಿರುದ್ಯೋಗ ನಿವಾರಣೆ ಅದಕ್ಕಾಗಿ ಪರಿಣಿತರ ಚಿಂತನ ನಿಧಿ ಸ್ಥಾಪನೆ, ಹೊಸ ಹೊಸ ಕಾರ್ಯಕ್ರಮಗಳ ಸೂಚನೆ.

ಪ್ರಕಟಣೆ :— ವಾರ್ತಾ ಮತ್ತು ಪ್ರಚಾರ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು.